# ಮಯೂರಿ ಕನ್ನಡ ಮಾರ್ಗದರ್ಶಿ

# 10ನೇ ತರಗತಿ

# ದ್ವಿತೀಯ ಭಾಷೆ ಕನ್ನಡ

**ನೀಲ ನಕ್ಷೆ ಆಧಾರಿತ**
***ಉತ್ತರ* ಸಹಿತ ಐದು**
**ಪ್ರಶ್ನೆ ಪತ್ರಿಕೆಗಳು**

SSLC

Exam Package

II[nd] Language Kannada

**ಕರುಣಾ ಪ್ರಕಾಶಕರು**
**ಬೆನಕನಕಟ್ಟಿ ಅಂಚೆ ನಿಗದಿ**
**ತಾ.ಜಿ: ಧಾರವಾಡ**
**ಮೊ.ನಂ: 9902660549**

**ರೂ. 35.00**

# ಪ್ರಕಾಶಕರ ಮಾತು

ಆತ್ಮೀಯ ಶಿಕ್ಷಕರೆ ಹಾಗೂ ವಿದ್ಯಾರ್ಥಿಗಳೆ ಹತ್ತನೆ ತರಗತಿ ದ್ವಿತೀಯ ಭಾಷೆ ಕನ್ನಡಕ್ಕೆ ಸಂಬಂಧಿಸಿದ **ಮಯೂರಿ ಕನ್ನಡ ಮಾರ್ಗದರ್ಶಿಯನ್ನು** ಓದಿ ಪ್ರೋತ್ಸಾಹಿಸಿದ ತಮ್ಮೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳು. ಸತತ ಮೂರು ವರ್ಷಗಳಿಂದ ಅಂದರೆ 2015ನೇ ಸಾಲಿನಿಂದ ಪ್ರಕಟವಾಗುತ್ತಿರುವ ಈ ಮಾರ್ಗದರ್ಶಿಯು ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಳಕ್ಕೆ ಸಹಕಾರಿಯಾಗಿದೆ ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಈಗ ನಾವು 2017–18ನೇ ಸಾಲಿನ ನೀಲನಕ್ಷೆ ಆಧರಿಸಿ ಐದು ಉತ್ತರ ಸಹಿತ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಪೂರ್ವ ಜ್ಞಾನ ಹಾಗೂ ವಲಯ ಮಟ್ಟದ ಪ್ರಶ್ನೆ ಪತ್ರಿಕೆ ತಯಾರಿಕಾ ಕಾರ್ಯಾಗಾರದಲ್ಲಿ ಭಾಗವಹಿಸಿದ ಅನುಭವದ ಆಧಾರದ ಮೇಲೆ ಸಿದ್ಧಪಡಿಸಿದ್ದೇವೆ. ಈ ಪ್ರಶ್ನೆ ಪತ್ರಿಕೆಗಳಲ್ಲಿಯ ಪ್ರಶ್ನೆಗಳಿಗೆ ಅತಿ ಸರಳ ಹಾಗೂ ಖಚಿತ ರೀತಿಯಲ್ಲಿ ಉತ್ತರಗಳನ್ನು ಬರೆಯಲಾಗಿದೆ. ಈ ಐದು ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳು ಓದಿ ಮನದಟ್ಟು ಮಾಡಿಕೊಂಡಲ್ಲಿ ಪ್ರತಿಶತ ನೂರಕ್ಕೆ ನೂರರಷ್ಟು ಅಂಕಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

ನಮ್ಮ ಈ ಕಾರ್ಯಕ್ಕೆ ಸದಾವಕಾಲ ಬೆಂಬಲ ನೀಡಿ ಪ್ರೋತ್ಸಾಹಿಸುತ್ತಿರುವ ಶ್ರೀ ಮಾಲಿಪಾಟೀಲ್ ಶಿವಾಜಿರಾವ್ ಮುಖ್ಯಗುರುಗಳು ಸರಕಾರಿ ಪ್ರೌಢ ಶಾಲೆ ಚಂಡಕಾಪೂರ ತಾ॥ ಬಸವಕಲ್ಯಾಣ ಇವರಿಗೂ ಸಹಕಾರ ನೀಡುತ್ತಿರುವ ಶ್ರೀ ಪಂಚಯ್ಯಸ್ವಾಮಿ ಬಿ. ಮಠ ಕನ್ನಡ ಭಾಷಾ ಶಿಕ್ಷಕರು ಸ.ಪ್ರೌ.ಶಾಲೆ ಕಾಕನಾಳ ತಾ॥ ಭಾಲ್ಕಿ ಹಾಗೂ ಪ್ರೇರಣೆ ನೀಡಿದ ಮಿತ್ರರಾದ ಶ್ರೀ ಎಸ್.ಬಿ.ಕಿಲಾರಹಟ್ಟಿ ಶಿಕ್ಷಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ಕರುಣಾ ಪ್ರಕಾಶಕರು**
**ಬೆನಕನಕಟ್ಟಿ ಅಂಚೆ ನಿಗದಿ**
**ತಾ.ಜಿ: ಧಾರವಾಡ**
**ಮೊ.ನಂ: 9902660549**

# ಪರಿವಿಡಿ


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ನೀಲ ನಕ್ಷೆ | 1 |
| 2 | ಮಾದರಿ ಪ್ರಶ್ನೆ ಪತ್ರಿಕೆ – 1 | 5 |
| 3 | ಮಾದರಿ ಪ್ರಶ್ನೆ ಪತ್ರಿಕೆ – 2 | 15 |
| 4 | ಮಾದರಿ ಪ್ರಶ್ನೆ ಪತ್ರಿಕೆ – 3 | 25 |
| 5 | ಮಾದರಿ ಪ್ರಶ್ನೆ ಪತ್ರಿಕೆ – 4 | 35 |
| 6 | ಮಾದರಿ ಪ್ರಶ್ನೆ ಪತ್ರಿಕೆ – 5 | 45 |

# ಪ್ರಶ್ನೆ ಪತ್ರಿಕೆಯ ವಿನ್ಯಾಸ ಹಾಗೂ ನೀಲ ನಕಾಶೆ

## ವಿಷಯ : ದ್ವಿತೀಯ ಭಾಷೆ ಕನ್ನಡ

**ಗರಿಷ್ಠ ಅಂಕಗಳು: 80** **ಅವಧಿ : 2.30 ಗಂಟೆ**

### 1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
|---|---|---|
| ಸ್ಮರಣೆ | 20 | 16 |
| ಗ್ರಹಿಕೆ | 40 | 32 |
| ಅಭಿವ್ಯಕ್ತಿ | 35 | 28 |
| ಪ್ರಶಂಸೆ | 05 | 04 |
| ಒಟ್ಟು | 100 | 80 |

### 2. ವಿಷಯಾನುಸಾರ ಪ್ರಾಮುಖ್ಯತೆ :

| ವಿಷಯ | ಪ್ರತಿಶತ | ದತ್ತ ಅಂಕಗಳು |
|---|---|---|
| ಗದ್ಯ | 31 | 25 |
| ಪದ್ಯ | 30 | 24 |
| ಪಠ್ಯಪೋಷಕ ಅಧ್ಯಯನ | 05 | 04 |
| ಅಪಠಿತ ಗದ್ಯ | 34 | 27 |
| ವ್ಯಾಕರಣ | | |
| ವಾಕ್ಯರಚನೆ | | |
| ಒಟ್ಟು | 100 | 80 |

### 3. ಪ್ರಶ್ನಾನುಸಾರ ಪ್ರಾಮುಖ್ಯತೆ :

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
|---|---|---|---|---|
| **ವಸ್ತುನಿಷ್ಠ** | 15 | 12 | 12 | 18 ನಿ |
| **ಕಿರು ಉತ್ತರಗಳು (1)** | 15 | 12 | 12 | 18 ನಿ |
| **ಕಿರು ಉತ್ತರಗಳು(2)** | 27 | 22 | 11 | 30 ನಿ |
| **ದೀರ್ಘ ಉತ್ತರಗಳು(1)** | 23 | 18 | 06 | 49 ನಿ |
| **ದೀರ್ಘ ಉತ್ತರಗಳು(2)** | 20 | 16 | 04 | 20 ನಿ |
| **ಒಟ್ಟು** | **100** | **80** | **45** | **135 + 15 ನಿಮಿಷ** |

## 4. ಕಠಿಣತೆಯ ಮಟ್ಟ :

| ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|
| 30% (24) | 50% (40) | 20% (16) | 100% (80) |

## 5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ:

| | | |
|---|---|---|
| ಬಹುಆಯ್ಕೆ ಪ್ರಶ್ನೆಗಳು | 1 ಅಂಕದ 12 ಪ್ರಶ್ನೆಗಳು | 12x1 = 12 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 12 ಪ್ರಶ್ನೆಗಳು | 12x1 = 12 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 11 ಪ್ರಶ್ನೆಗಳು | 11x2 = 22 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 6 ಪ್ರಶ್ನೆಗಳು | 6x3 = 18 |
| 8–10 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2x4 = 8 |
| ಪ್ರಬಂಧ ಮತ್ತು ವಿಸ್ತಾರವಾಗಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2x4 = 8 |
| ಒಟ್ಟು | 45 ಪ್ರಶ್ನೆಗಳು | 80 ಅಂಕಗಳು |

## 6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ:

| ಕ್ರ. ಸಂ | ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯರಚನೆ + ಅಪಠಿತಗದ್ಯ | ಒಟ್ಟು |
|---|---|---|---|---|---|---|---|
| 1 | ಬಹು ಆಯ್ಕೆ | – | – | – | 12 | – | 12 |
| 2 | ಅಪಠಿತ ಗದ್ಯ | – | – | – | – | 4 | 4 |
| 3 | ಒಂದು ವಾಕ್ಯದ ಉತ್ತರಗಳು | 5 | 3 | – | – | – | 8 |
| 4 | 3–4 ವಾಕ್ಯದ ಉತ್ತರಗಳು | 10 | 8 | 4 | – | – | 22 |
| 5 | 5–6 ವಾಕ್ಯದ ಉತ್ತರಗಳು | 3 | 3 | – | – | – | 6 |
| 6 | ಕವಿ ಪರಿಚಯ | 3 | 3 | – | – | – | 6 |
| 7 | ಗಾದೆಗಳು | – | – | – | – | 3 | 3 |
| 8 | ಕಂಠಪಾಠ | – | 3 | – | – | – | 3 |
| 9 | 8–10 ವಾಕ್ಯಗಳ ಉತ್ತರಗಳು | 4 | 4 | – | – | – | 8 |
| 10 | ಪತ್ರ | – | – | – | – | 4 | 4 |
| 11 | ಪ್ರಬಂಧ | – | – | – | – | 4 | 4 |
| | ಒಟ್ಟು | 25 | 24 | 04 | 12 | 15 | 80 |

## ೬. ನೀಲ ನಕಾಶೆ

**ದ್ವಿತೀಯ ಭಾಷೆ ಕನ್ನಡ**

| ಕ್ರ.ಸಂ | ಪಾಠದ ಹೆಸರು | ಜ್ಞಾನ | | | ಗ್ರಹಿಕೆ | | | | ಅಭಿವ್ಯಕ್ತಿ | | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ.ನಿ | ಕಿ.ಉ.1 | ದೀ.ಉ.1 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ವ.ನಿ | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | ದೀ.ಉ.1 | ವ.ನಿ | ಕಿ.ಉ.1 | ಕಿ.ಉ.2 | ದೀ.ಉ.1 | ದೀ.ಉ.2 | ದೀ.ಉ.3 | | |
| 1 | ಒಣಮರದಗಿಳಿ | | | | | 1(1) | 2(1) | | | | | | | | | 1(1) | 2(1) | | | | 3 | 2 |
| 2 | ಅಸಿ–ಮಸಿ–ಕೃಷಿ | | | | | 1(1) | | | | | 3(1) | | | | | 1(1) | | 3(1) | | | 4 | 2 |
| 3 | ಗಾನಯೋಗಿ ಪುಟ್ಟರಾಜ ಗವಾಯಿ | | 1(1) | | | | | | | | 3(1) | | | | | 1(1) | | 3(1) | | | 4 | 2 |
| 4 | ಹಕ್ಕಿಗೂಡುಗಳ ನಿಗೂಢ ಜಗತ್ತು | | | | | 1(1) | 2(1) | | | | | | | | | 1(1) | 2(1) | | | | 3 | 2 |
| 5 | ಕಾಫಿ–ಕಪ್ಪು | | | | | 1(1) | 2(1) | | | | | | | | | 1(1) | 2(1) | | | | 3 | 2 |
| 6 | ಟುಸ್ಸೋಡ್ ವಾಕ್ಸ್ ಮ್ಯೂಸಿಯಂ | | | | | | 2(2) | | | | | | | | | | 2(2) | | | | 4 | 2 |
| 7 | ನನ್ನ ಗೋಪಾಲ | | | | | | | | | | | 4(1) | | | | | | | 4(1) | | 4 | 1 |
| | ಗದ್ಯ ಒಟ್ಟು | | 1(1) | | | 1(4) | 2(5) | | | | 3(2) | 4(1) | | | | 1(5) | 2(5) | 3(2) | 4(1) | | 25 | 13 |

3

| | | ಜ್ಞಾನ | | | | ಗ್ರಹಿಕೆ | | | ಅಭಿವ್ಯಕ್ತಿ | | | | | ಪ್ರಶಂಸೆ | ಒಟ್ಟು | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| 1 | ಏಣಿ | | | | | 1(1) | 2(1) | | | | | | | | | 1(1) | 2(1) | | | | 3 | 2 |
| 2 | ಬೋಧಿವೃಕ್ಷದ ಹಾಡು | | | | | | | | | | 3(1) | | | | | | | 3(1) | | | 3 | 1 |
| 3 | ಸವಿ ಚೈತ್ರ | | | | | 1(1) | 2(1) | | | | | | | | | 1(1) | 2(1) | | | | 3 | 2 |
| 4 | ಸದ್ದು ಮಾಡದಿರು | | | | | | 2(1) | | | | | | | | | | 2(1) | | | | 2 | 1 |
| 5 | ಗುರಿ | | | | | | | | | | | | | 4(1) | | | | | 4(1) | | 4 | 1 |
| 6 | ಮೂಡಲ್ ಕುಣಿಗಲ್ ಕೆರೆ | | | | | | 2(1) | | | | | | | | | | 2(1) | | | | 2 | 1 |
| 7 | ವಚನಗಳು | | | 3(1) | | | | | | | | | | | | | | 3(1) | | | 3 | 1 |
| 8 | ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ | | | | | 1(1) | | | | | 3(1) | | | | | 1(1) | | 3(1) | | | 4 | 2 |
| | ಪದ್ಯ ಒಟ್ಟು | | | 3(1) | | 1(3) | 2(4) | | | | 3(2) | | | 4(1) | | 1(3) | 2(4) | 3(3) | 4(1) | | 24 | 11 |
| 1 | ಕಳ್ಳಗುರು | | | | | | | | | 2(1) | | | | | | | 2(1) | | | | 2 | 1 |
| 2 | ಹೊಂಗೆ ಬೇವುಗಳ ಹಾಡು | | | | | | | | | 2(1) | | | | | | | 2(1) | | | | 2 | 1 |
| | ಪೋಷಕ ಅಧ್ಯಯನ ಒಟ್ಟು | | | | | | | | | 2(2) | | | | | | | 2(2) | | | | 4 | 2 |
| 1 | ಅಪಠಿತ ಗದ್ಯ | | | | | 1(4) | | | | | | | | | | 1(4) | | | | | 4 | 4 |
| | ಅಪಠಿತ ಗದ್ಯ ಒಟ್ಟು | | | | | 1(4) | | | | | | | | | | 1(4) | | | | | 4 | 4 |
| 1 | ವ್ಯಾಕರಣ | 1(12) | | | | | | | | | | | | | 1(12) | | | | | | 12 | 12 |
| 3 | ಗಾದೆ | | | | | | | 3(1) | | | | | | | | | | 3(1) | | | 3 | 1 |
| 5 | ಪತ್ರ / ಪ್ರಬಂಧ | | | | | | | | | | | 4(2) | | | | | | | 4(2) | | 8 | 2 |
| | ಒಟ್ಟು | 1(12) | | | | | | 3(1) | | | | 4(2) | | | 1(12) | | | 3(1) | 4(2) | | 23 | 15 |
| | ಸಮಗ್ರ ಒಟ್ಟು | 12 | 1 | 3 | | 11 | 18 | 3 | | 4 | 12 | 12 | | 4 | 12 | 12 | 22 | 18 | 16 | | 80 | 45 |
| | | 16(14) | | | | 32(21) | | | 28(9) | | | | | 4(1) | 80(45) | | | | | | | |

**ಸೂಚನೆ :** ಆವರಣದ ಹೊರಗೆ ತಲಾ ಅಂಕ, ಆವರಣದ ಒಳಗೆ ಪ್ರಶ್ನಾ ಸಂಖ್ಯೆ ಇದೆ

4

# ದ್ವಿತೀಯ ಭಾಷೆ ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ – 1

**ಹತ್ತನೇ ತರಗತಿ** **ಅಂಕಗಳು – 80** **ಅವಧಿ – 2.30ಗಂಟೆ**

**ಸೂಚನೆಗಳು :** ಪ್ರಶ್ನೆಪತ್ರಿಕೆಯು ಎ. ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಗಳನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

## ಭಾಗ – ಎ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ ?
ಉತ್ತರ : ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ 'ಪಾಲ್ ಹ್ಯಾರಿಸ್' ಪ್ರಶಸ್ತಿ ನೀಡಿದೆ.

2. ಸಸ್ತನಿಗಳ ಆಶ್ರಯದಾನಗಳು ಯಾವುವು ?
ಉತ್ತರ: ಗುಹೆ, ಪೊಟರೆ, ಗೂಡು, ಬಿಲದಂಥ ಜಾಗಗಳು ಸಸ್ತನಿಗಳ ಆಶ್ರಯದಾಣಗಳಾಗಿವೆ.

3. ವಿಧ್ಯಾರ್ಥಿಗಳು ಕಾಫೀ ಕುಡಿಯಲು ಎಂಥಹ ಕಪ್ಪುಗಳನ್ನು ಆರಿಸಿಕೊಂಡರು ?
ಉತ್ತರ. ವಿದ್ಯಾರ್ಥಿಗಳು ಕಾಫೀ ಕುಡಿಯಲು ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

4. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?
ಉತ್ತರ. ಬಣ್ಣ ಬಣ್ಣದ ಹೂಗಳು ಸಾವಿರಾರು ಮಳೆ ಬಿಲ್ಲುಗಳು ಸೇರಿ ಕಣಿದಂತೆ ಕಾಣಿಸುತ್ತಿದ್ದವು.

5. ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ ?
ಉತ್ತರ. ಗೊಪಾಲನ ಸ್ನೇಹಿತರು ಹೊಸ ಹೊಸ ಬಟ್ಟೆ ಹಾಕಿಕೊಂಡು ಬರುತ್ತಿದ್ದರು. ಇವನ ಹಳೆ ಪಂಚೆಯನ್ನು ನೋಡಿ ಅಪಹಾಸ್ಯ ಮಾಡುತ್ತಿದ್ದರು ಆದ್ದರಿಂದ ಗೋಪಾಲನು ತನಗೆ ಹೊಸ ಪಂಚೆ ಬೇಕೆಂದು ಬಯಸಿದನು.

6. ಏಣಿಗೆ ಬೀಳುವ ಭಯವಿಲ್ಲ ಏಕೆ ?
ಉತ್ತರ. ಏಣಿಯು ಆನೆ ಭಾರ ಹೊತ್ತ ಗಟ್ಟಿ ನೆಲದ ಮೇಲೆ ಕಾಲೂರಿ ನಿಂತಿರುವುದರಿಂದ ಅದಕ್ಕೆ ಬೀಳುವ ಭಯವಿಲ್ಲ.

7. ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ ?
ಉತ್ತರ: ಕೆರೆಯನ್ನು ತೋಡಿದಾಗ ನೀರು ಬರದೆ ಇದ್ದರೆ, ಕೆರೆ ತೋಡಿದ್ದು ನಿಷ್ಫಲವಾಗುತ್ತದೆ.

8. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?
ಉತ್ತರ: ಧುರಕ್ಕೆ ಬೆನ್ನು ಹಾಕಿದರೆ ಹಜ್ಜೆ-ಹೆಜ್ಜೆಗೆ ಪಾತಕ ಪ್ರಾಪ್ತಿಯಾಗುತ್ತದೆ.

ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.

9. ಹಕ್ಕಿ ಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?
ಉತ್ತರ: ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ, ಕಾವು, ಗುಟುಕು ಪಡೆದು ಜೀವ ಕಣ್ತೆರೆಯುವ ಸೃಷ್ಟಿಯ ಅಚ್ಚರಿಯಿದೆ. ಶತೃಗಳ ಬೇಟೆ ಹಾಗೂ ಪ್ರಕೃತಿಯ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಎಲ್ಲ ಅವಘಡಗಳನ್ನು ಎದುರಿಸಿ ಬದುಕುವ ಸಾಹಸ ಗಾಥೆ ಕಾಣುತ್ತದೆ. ಹಾಗೂ ಕಲಾವಿದನ ಸೃಜನ ಸಾಮಥ್ಯ ಹಾಗೂ ವಿಜ್ಞಾನಿಯ ತಂತ್ರಜ್ಞಾನ ಸಮನ್ವಯಗೊಂಡಿದೆ.

10. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?
ಉತ್ತರ. ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಕಾಫೀ ಮಾತ್ರ, ಕಪ್ಪುಗಳನ್ನಲ್ಲ. ಭಗವಂತ ಕೊಟ್ಟ ಜೀವನವನ್ನು ಆಸ್ವಾದಿಸಬೇಕು. ಹಣ, ಅಧಿಕಾರ, ಅಂತಸ್ತುಗಳ ಬೆನ್ನತ್ತಿ ಜೀವನವನ್ನು ಮರೆಯಬಾರದು. ನಿಮಗೆ ಕಪ್ಪುಗಳ ಚಿಂತೆ ಬೇಡ ಕಾಫೀ ಆಸ್ವಾದಿಸಿರಿ ಎಂದು ಬದುಕಿನ ರೀತಿಯನ್ನು ಗುರುಗಳು ತಿಳಿಸಿದರು.

11. ಲಂಡನ್ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ ತಿಳಿಸಿದ ವಿಚಾರಗಳೇನು ?
ಉತ್ತರ. 1666 ರಲ್ಲಿ ಲಂಡನ್‌ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ ಮೂರು ದಿನಗಳ ಕಾಲ ಲಂಡನ್ ನಗರ ಹೊತ್ತಿ ಉರಿಯಿತು. ಅದರಲ್ಲಿ 13000 ಮನೆಗಳು, 80 ಚರ್ಚ್‌ಗಳು ಸುಟ್ಟು ಹೊದವು. ಈ ದುರಂತದ ನೆನಪಿಗಾಗಿ ಎರಡು ನೂರು ಅಡಿ ಎತ್ತರದ ಸ್ತಂಭ ನಿಲಿಸಿದ್ದಾರೆ. ಅದಕ್ಕಿಂತ ಒಂದೆರಡು ವರ್ಷದ ಹಿಂದೆ ಪ್ಲೇಗ್ ಎಂಬ ಸಾಂಕ್ರಾಮಿಕ ರೋಗಕ್ಕೆ 13000 ಜನರು ಸತ್ತು ಹೋದ ದುರಂತಗಳನ್ನು ಗೈಡ್ ತಿಳಿಸಿದರು.

12. ಥೇಮ್ಸ್ ನದಿಯ ಮೆಲಿರುವ ಪ್ರಸಿದ್ಧ ಸೇತುವೆಗಳು ಯಾವುವು ?
ಉತ್ತರ. ಥೇಮ್ಸ್ ನದಿಯ ಮೇಲೆ ಟವರ್ ಬ್ರಿಜ್, ವೆಸ್ಟ್ ಮಿನಿಸ್ಟರ್ ಬ್ರಿಜ್, ವಾಟರ್ಲೂ ಬ್ರಿಜ್, ಲಂಡನ್ ಬ್ರಿಜ್ ಪ್ರಸಿದ್ಧ ಸೇತುವೆಗಳಾಗಿವೆ.

13. ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು ?
ಉತ್ತರ. ಬನದಲ್ಲಿ ಏನಮ್ಮ ಸೊಗಸು! ಮಲ್ಲಿಗೆ, ಸಂಪಿಗೆ, ಕೇದಗೆ, ಪರ್ವತಬಾಳೆ ಮುಂತಾದ ಬಣ್ಣ ಬಣ್ಣದ ಹೂಗಳು, ಸಾವಿರಾರು ಮಳೆ ಬಿಲ್ಲುಗಳು ಸೇರಿ ಕಣಿದಂತೆ ತೋರುತಿತ್ತು. ಹಕ್ಕಿಗಳ ಇಂಪಾದ ಗಾನ, ತಂಗಾಳಿ, ಸೂರ್ಯನ ಹೊಂಬೆಳಕು, ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಾಂತರ ಹಿಮಮಣಿಗಳು ಮಿರುಗುವ ಲೀಲೆ ಮನೆಗಿಂತ ಬನವೇ ಸೊಗಸಮ್ಮ, ನೀನೊಬ್ಬಳಲ್ಲಿದ್ದರೆ... ಎಂದು ಗೋಪಾಲನು ಹೂಬನದ ಸೊಗಸನ್ನು ವರ್ಣಿಸಿದನು.

14. ಏಣಿ ತಾನು ಏಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?
ಉತ್ತರ. ಯಾವ ಜನರಲ್ಲಿ ವಿನಯ, ವಿಧೇಯತೆ, ನಮ್ರತೆ ಇರುತ್ತದೆಯೋ ಅಂತವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿಯುತ್ತೇನೆಂದು ಏಣಿ ಭರವಸೆ ನೀಡುತ್ತದೆ.

15. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು ?
ಉತ್ತರ: ಕರ್ಪೂರವು ತಟ್ಟೆಯೊಳಗೆ ಕರಗುವಂತೆ, ದೀಪದೆದುರು ಕತ್ತಲೆ ನಿಲ್ಲದೆ ಸರಿದು ಹೋಗುವಂತೆ, ಹಡಗು ಬಂದರನ್ನು ಸೇರಿ ಶಾಂತವಾಗಿ ನಿಲ್ಲುವಂತೆ, ರವಿ ಕಿರಣಕ್ಕೆ ಸದ್ದಿಲ್ಲದೆ ಕರಗಿ ನೀರಾಗುವ ಇಬ್ಬನಿಯಂತೆ ನೀನು ಬದುಕಿನಲ್ಲಿ ಸದ್ದಿಲ್ಲದೆ ಬಾಳಬೇಕು ಎಂದು ಕವಿ ತಿಳಿಯಹೇಳಿದ್ದಾರೆ.

16.ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?
ಉತ್ತರ: ಬಲೆಯಲ್ಲಿ ಸಿಕ್ಕಿಕೊಂಡ ಮೀನುಗಳನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ವಿಲವಿಲ ಒದ್ದಾಡುವ ಪರಿಯನ್ನು ಜನಪದರು ಬೊಬ್ಬೆ ಹೊಡೆದಾವೆ ಬಾಳೆಮೀನು ಎಂದು ವರ್ಣಿಸಿದ್ದಾರೆ.

17. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸುತ್ತಾರೆ ?
ಉತ್ತರ: ನದಿಯ ಸ್ನಾನ ಮಾಡಿದರೆ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದೂ ಮರವನ್ನು ಸುತ್ತಿದರೆ ಪಾಪ ಕರ್ಮಗಳು ನಾಶವಾಗುತ್ತವೆ ಎಂದು ತಿಳಿಯುವುದು ಕುರುಡು ಸಂಪ್ರದಾಯ. ಒಣಗುವ ಮರವನ್ನು ಬತ್ತುವ ಜಲವನ್ನು ನೆಚ್ಚಿದವರು ನಿರಾಕಾರ ಪರಮಾತ್ಮನಾದ ಕೂಡಲಸಂಗಮದೇವನನ್ನು ಹೇಗೆ ಅರಿಯಬಲ್ಲರು. ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

18. ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು ?

ಉತ್ತರ: ಪಟ್ಟಣದಲ್ಲಿರುವ ಯಾವ ವೈದ್ಯರೂ ಕಳ್ಳನಾದ ಭೀಮನಾಯಕನ ಹಟ್ಟಿಗೆ ಹೋಗುತ್ತಿರಲಿಲ್ಲ. ಆದರೆ ಜೀವಭಯವನ್ನು ಲೆಕ್ಕಿಸದೇ ವೈದ್ಯರು ಅವರೊಂದಿಗೆ ಹೋಗಿ ಭೀಮನಾಯಕನ ಮಗನ ಪ್ರಾಣ ಉಳಿಸಿ 'ನೋಡು ಭೀಮಣ್ಣಾ ಕಾಯುವುದು ದೇವರ ಕೆಲಸ ಕೊಲ್ಲುವುದು ರಾಕ್ಷಸರ ಕೆಲಸ' ಎಂದು ವೈದ್ಯರು ಹೇಳಿದ ಮಾತುಗಳನ್ನು ಕೇಳಿದ ಭೀಮನಾಯಕನ ಮನಃಪರಿವರ್ತನೆಯಾಯಿತು.

19. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ ?

ಉತ್ತರ: ಸಮೃದ್ಧವಾದ ಹಸಿರುಮಯ ವಾತಾವರಣ ನಿರ್ಮಾಣಗೊಳ್ಳಲು ಬೆವರು ಸುರಿಸಿ ದುಡಿಯಬೇಕಿದೆ ತೆಂಗು ತಾರೆಗಳ ನಾಡಿನಲ್ಲಿ. ಕಾಡುಗಳಲ್ಲಿ ಹೊಂಗೆ ಹಿಪ್ಪೆಯಂತ ಜೀವಾಮೃತ ನೀಡುವ ಮರಗಳು ಹೇರಳವಾಗಿ ಬೆಳೆಯಬೇಕಿದೆ. ಈ ರೀತಿಯ ಪರಿಸರದಲ್ಲಿ ಮನುಕುಲದ ಮೊಳಕೆ ಒಡೆದು ಭವ್ಯ ಬದುಕು ಅರಳಬೇಕಿದೆ.

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ**

20. ಕೊರಡ ಕೊನರಿಸಿ **ತುದಿಗೆ ಮುಗುಳ ನಗೆ ಮುತ್ತಿಟ್ಟು**
**ಬರಡು ಜೀವಕೆ ಹೊಸತು ಚೈತನ್ಯವು**
**ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ**
**ಚಿಲಿಪಿಲಿಯ ಕಲರವಕೆ** ಮತ್ತೇರಿದೆ

**ಅಥವಾ**

ಯುಗದ ಹಿಂದಿನ **ಕೊಳೆಯ ತಿಕ್ಕಿ ಮೈ ತೊಳೆದಂತೆ**
**ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ**
**ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ**
**ಎಲ್ಲರೆದೆಗಳ ತುಂಬ** ಸವಿಚೈತ್ರವು

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ**

21. 'ಅದರ ಈಗಿನ ವ್ಯವಸ್ಥೆಯನ್ನು ನಾನು ನೋಡಲಾರೆ'

**ಹೇಳಿಕೆ :** ಈ ವಾಕ್ಯವನ್ನು ಅ.ರಾ.ಮಿತ್ರ ರವರು ಬರೆದ ಒಣಮರದ ಗಿಳಿ ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. ಆಕರಗ್ರಂಥ – ಮಹಾಭಾರತ ಪಾತ್ರ ಸಂಗತಿಗಳು.

**ಸಂದರ್ಭ :** ಒಣಗಿ ಬರಡಾಗಿನಿಂತಿರುವ ಮರವನ್ನು ನೋಡಲಾಗದೆ ಗಿಳಿಯು ಇಂದ್ರನಿಗೆ ಈ ಮಾತನ್ನು ಹೇಳುತ್ತದೆ.

**ವಿವರಣೆ :** ಗಿಳಿಯ ಪರಹಿತಕಾಂಕ್ಷೆಯ ಗುಣವನ್ನು ಮೆಚ್ಚಿಕೊಂಡ ಇಂದ್ರನು ಗಿಳಿರಾಯನಿಗೆ ಏನಾದರು ವರವನ್ನು ಕೇಳು ಕೊಡುತ್ತೇನೆ ಎಂದನು. ಆಗ ಗಿಳಿಯು ಇಂದ್ರನಿಗೆ ಈ ಮರವು ಮೊದಲಿನಂತೆ ಹಸಿರಿನಿಂದ ಕಳಕಳಿಸುವ, ಫಲ ಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸಬೇಕು. ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ ಎಂದಿತು.

22. 'ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ'

**ಹೇಳಿಕೆ:** ಪ್ರಸ್ತುತ ಈ ವಾಕ್ಯವನ್ನು ಕವಿ ಗದುಗಿನ ನಾರಾಣಪ್ಪ ರಚಿಸಿದ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಆಕಾರ ಗ್ರಂಥ– ಕರ್ನಾಟ ಭಾರತ ಕಥಾ ಮಂಜರಿ.

**ಸಂದರ್ಭ:** ಯುದ್ಧ ಭೂಮಿಗೆ ಬೆನ್ನು ತೋರಿಸಿ ರಥದಿಂದ ಇಳಿದು ಓಡುತ್ತಿರುವ ಉತ್ತರನಿಗೆ ಅರ್ಜುನ ಹೇಳುವ ಮಾತು ಇದಾಗಿದೆ.

**ವಿವರಣೆ:** ಉತ್ತರನು ರಥದಿಂದ ಇಳಿದು ಓಡುತ್ತಿರುವಾಗ ಅವನನ್ನು ಹಿಂಬಾಲಿಸಿ ಹಿಡಿದು ನಿಲ್ಲಿಸಿದಾಗ ಅಂಜುಬುರುಕ ನರಿಯಂತೆ ಹಲ್ಲು ಕಿರಿಯುತ್ತಾ ನಿಂತಿರುತ್ತಾನೆ. ಆಗ ಅರ್ಜುನ ಉತ್ತರನಿಗೆ 'ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ' ಯುದ್ಧ ಮಾಡು ನಡೆ ಎಂದು ಗದರಿಸಿದನು.

**ಸಾಹಿತಿಗಳ ಕಾಲ, ಕೃತಿ, ಸ್ಥಳ ಕುರಿತು ವಾಕ್ಯ ರೂಪದಲ್ಲಿ ಪರಿಚಯ ಬರೆಯಿರಿ**

23. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ

ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು 1951ರಲ್ಲಿ ಜನಿಸಿದ ಇವರು ಸಾಣೆಹಳ್ಳಿಯಲ್ಲಿ ರಂಗಶಾಲೆಯನ್ನು ಸ್ಥಾಪಿಸಿ ಪ್ರತಿವರ್ಷ ರಾಷ್ಟ್ರೀಯ ನಾಟಕೋತ್ಸವ, ಶಿವಸಂಚಾರ, ವರ್ಷದ ಹರ್ಷ, ಶ್ರಾವನಸಂಜೆ ಕಾರ್ಯಕ್ರಮಗಳನ್ನು ಸಂಘಟಿಸುತ್ತಾಬಂದಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ ಜೀವನ ದರ್ಶನ, ಕೈದೀವಿಗೆ, ಹುಟ್ಟುಸಾವುಗಳ ಮಧ್ಯೆ, ಸಮಾದಿಯ ಮೇಲೆ, ಕಾಯಕ ದಸೋಹ, ಸುಖ ಎಲ್ಲಿದೆ ? ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಪ್ರಶಸ್ತಿಗಳು – ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಫೆಲೋಷಿಪ್, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಹಾಗೂ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯು ಪಾಲ್ ಹ್ಯಾರಸ್ ಪ್ರಶಸ್ತಿ ನೀಡಿ ಗೌರವಿಸಿದೆ.

**24. ಬಸವರಜ ಸಬರದ**

ಬಸವರಾಜ ಸಬರದ ಅವರು 1954ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದ್ದಾರೆ. ದಲಿತ–ಬಂಡಾಯ ಚಳುವಳಿಯ ನೇತಾರರಾದ ಇವರು ಜನಪರ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ನನ್ನವರ ಹಾಡು, ಹೋರಾಟ, ಮೂಡಲಕ ಕೆಂಪು ಮೂಡ್ಯಾನ, ನೂರು ಹನಿಗಳು, ದನಿಯೆತ್ತಿ ಹಾಡೇನ, ಬೆಳದಿಂಗಳು ಬಿಸಿಲಾತು, ಪದಕಟ್ಟಿ ಹಾಡೇನ ಮುಂತಾದ ಕವನ ಸಂಕಲನಗಳನ್ನು ಬರೆದಿದ್ದಾರೆ. ಪ್ರತಿರೂಪ, ರೆಕ್ಕೆ ಮೂಡಿದಾಗ, ನರಬಲಿ, ಬೆಳ್ಳಕ್ಕಿ ಸಾಲು – ಇವು ಇವರು ಬರೆದ ನಾಟಕಗಳು. ಶ್ರೀಯುತರಿಗೆ ದೇವರಾಜ ಬಹದ್ದೂರ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಪೆರ್ಲ್ ಕೃಷ್ಣಭಟ್ಟ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಸಾಹಿತ್ಯ ಶ್ರೀ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

25. ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ. ಹೇಗೆ ? ಸಮರ್ಥಿಸಿ.

ಉತ್ತರ: ಪುಟ್ಟರಾಜರು ಪಾಣಿನಿಯ **ಅಷ್ಟಾಧ್ಯಾಯಿ**, ಶರ್ವವರ್ಮನ **ಕಾತಂತ್ರ**, ಕೇಶಿರಾಜನ **ಶಬ್ಧಮಣಿ ದರ್ಪನ**, ನಿಜಗುಣ ಶಿವಯೋಗಿಗಳ **ಕೈವಲ್ಯ ಪದ್ಧತಿ** ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ದಾನುಶಾಸ್ತ್ರ, ಛಂದಶಾಸ್ತ್ರ, ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ಧವಾಗಿ ಕಲಿತು ಅವುಗಳಲ್ಲಿ ನಿಷ್ಣಾತರಾದರು. ಬ್ರೈಲ್ ಲಿಪಿಯನ್ನು ಕಲಿತು 75ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು ಸಂಗೀತಗಾರರಾಗಿ, ಹಾಡುಗಾರರಾಗಿ, ವಾಗ್ಗೇಯಕಾರರಾಗಿ, ಕವಿಯಾಗಿ ಸಾಹಿತಿಯಾಗಿ, ಸಮಾಜಸುಧಾರಕರಾಗಿ, ದಾರ್ಶನಿಕ ಪತ್ರಿಕೆಯ ಮಾರ್ಗದರ್ಶಕರಾಗಿ ಅಪೂರ್ವ ಸಾಧನೆ ಮಾಡುವಲ್ಲಿ ಅಂಗಹೀನತೆ ಅವರಿಗೆ ಅಡ್ಡಿಯಾಗಲಿಲ್ಲ.

**ಅಥವಾ**

ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ.

ಉತ್ತರ: ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವುದರಲ್ಲಿ ತುಂಬಾ ಆಸಕ್ತಿ ಇತ್ತು. ಒಮ್ಮೆ ಮನೆಯಲ್ಲಿ ಯಾರು ಇಲ್ಲದಾಗ ಹಾರ್ಮೋನಿಯಂ ನುಡಿಸಲು ಆಂಭಿಸಿದ. ಹಾರ್ಮೋನಿಯಂನಿಂದ ಹೊರಟ ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗು ಹೊರಗೂ ನೆರೆದರು. ಹೊಲಕ್ಕೆ ಹೋಗಿದ್ದ ಅವರ ಮಾವ ಮನೆಗೆ ಬಂದಾಗ ನೆರೆದಿದ್ದ ಜನರನ್ನು ನೋಡಿ ಆಶ್ಚರ್ಯಚಕಿತರಾದರು. ಮಾವನ ಕಾಲು ಸಪ್ಪಳ ಕೇಳಿ ಎಚ್ಚೆತ್ತ ಬಾಲಕ ಇನ್ನೊಮ್ಮೆ ಹಾರ್ಮೋನಿಯಂ ಮುಟ್ಟುವುದಿಲ್ಲ ಎಂದು ಅಳಲಾರಂಬಿಸಿದ. ಅಳುತ್ತಿದ್ದ ಬಾಲಕನನ್ನು ಎದೆಗಪ್ಪಿಕೊಂಡ ಅವರ ಮಾವ ಈ ಹಾರ್ಮೋನಿಯಂ ಇನ್ನು ಮುಂದೆ ನನ್ನದಲ್ಲ ಇದು ನಿನ್ನ ಆಸ್ತಿ ಎಂದು ಸಂತೈಸಿ ಆನಂದಬಾಷ್ಪ ಸುರಿಸಿದರು.

26. ಅಡಿಗರ ಪರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ?

ಉತ್ತರ: ಜೀವನದಲ್ಲಿ ಒಂದೇ ಒಂದು ಗುರಿಯನ್ನು ಇಟ್ಟುಕೊಂಡು ಅದಕ್ಕಾಗಿ ಹಗಲಿರುಳು ಹೋರಾಡಬೇಕು. ಆದರೆ ಸ್ವಾರ್ಥಿಗಳಾಗಬಾರದು, ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು ಇದುವೇ ಮನುಷ್ಯ ಜೀವನ. ಕಮಲ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದಳವನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿಸೇರಿ ಜೀವನ

ಸಾರ್ಥಕಮಾಡಿಕೊಳ್ಳುತ್ತದೆ. ಹಾಗೆ ಮಾನವನು ತನ್ನ ಕೀಳರಿಮೆಯನ್ನು ತೊರೆದು ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಅಡಿಗರು ಹೇಳುತ್ತಾರೆ.

**ಅಥವಾ**

* ಗುರಿ ಪದ್ಯದ ಸಾರಾಂಶ ಬರೆಯಿರಿ

ಉತ್ತರ: ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು ಆಗ ಜೀವನ ಸಾರ್ಥಕತೆ ಹೊಂದುತ್ತದೆ. ಕಮಲ ಕೆಸರೊಳಗೆ ಹುಟ್ಟಿದರೂ ದೇವರ ಮುಡಿ ಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿ ಕಿರಣಗಳಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಠವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ತಲುಪುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.

**ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

ಗುಮ್ಮಟಗಳ ನಗರಿ ಕಲಬುರಗಿಯಲ್ಲಿ ಐತಿಹಾಸಿಕ ಸ್ಮಾರಕ ಹಾಗೂ ಕಟ್ಟಡಗಳು ಎಲ್ಲೆಂದರಲ್ಲಿ ಕಾಣಬರುತ್ತವೆ. ಈ ನಗರದಲ್ಲಿ ಸೂಫಿ ಸಂತರಾದ ಖ್ವಾಜಾ ಬಂದೇನವಾಜರ ದರ್ಗಾ ಇದೆ. ಅವರು ತಮ್ಮ ಎಂಬತ್ತನೇ ವಯಸ್ಸಿನಲ್ಲಿ ಕಲಬುರ್ಗಿಗೆ ಬಂದು ನೆಲೆಸಿದರು. ದರ್ಗಾದ ಪ್ರಾಕಾರದ ನಡುವೆ ಅವರ ಗೋರಿಯಿದೆ. ಇದರ ಮೇಲೆ ಬೃಹದಾಕಾರದ ಗೊಮ್ಮಟ ಕಟ್ಟಲಾಗಿದೆ. ದರ್ಗಾದ ಗೋಡೆಗಳನ್ನು ಬಂಗಾರದ ವರ್ಣದಿಂದ ಚಿತ್ರಿಸಲಾಗಿದೆ ಮತ್ತು ಖುರಾನಿನ ವಚನಗಳಿಂದ ಅಲಂಕರಿಸಲಾಗಿದೆ. ಇಲ್ಲಿನ ಚಿತ್ರಕಲೆ ಟರ್ಕಿ ಹಾಗೂ ಇರಾನಿ ಶೈಲಿಯದು ಬಂದೇನವಾಜರು ಪರ್ಷಿಯನ್ ಭಾಷಾ ಪಂಡಿತರಾಗಿದ್ದು ಭಾರತದಲ್ಲಿಯೆ ಮೊದಲ ಬಾರಿಗೆ ಉರ್ದು ಗದ್ಯ ಗ್ರಂಥಗಳನ್ನು ರಚಿಸಿದ ಖ್ಯಾತಿ ಇವರದಾಗಿದೆ. ಕ್ರಿ ಶ 1402 ರಿಂದ 1422 ರ ತನಕ ಕಲಬುರ್ಗಿಯಲ್ಲಿ ಜೀವಿಸಿದ್ದರು. ಈ ಸಂತರ ಉರುಸ್ಸು ಜಖೈದ ತಿಂಗಳ ಹದಿನೈದನೇ ದಿನದಂದು ನಡೆಯುತ್ತದೆ.

27. ಖ್ವಾಜಾ ಬಂದೇನವಾಜರ ದರ್ಗಾ ಎಲ್ಲಿದೆ ?

ಉತ್ತರ: ಖ್ವಾಜಾ ಬಂದೇನವಾಜರ ದರ್ಗಾ ಕಲಬುರಗಿಯಲ್ಲಿದೆ.

28. ಬಂದೇನವಾಜರ ದರ್ಗಾದ ಗೋಡೆಯನ್ನು ಹೇಗೆ ಅಲಂಕರಿಸಲಾಗಿದೆ ?
ಉತ್ತರ: ಬಂದೇನವಾಜರ ದರ್ಗಾದ ಗೋಡೆಯನ್ನು ಖುರಾನಿನ ವಚನಗಳಿಂದ ಅಲಂಕರಿಸಲಾಗಿದೆ.

29. ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಉರ್ದು ಗದ್ಯ ಗ್ರಂಥಗಳನ್ನು ರಚಿಸಿದವರು ಯಾರು ?
ಉತ್ತರ: ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಉರ್ದು ಗದ್ಯ ಗ್ರಂಥಗಳನ್ನು ರಚಿಸಿದವರು ಖ್ವಾಜಾ ಬಂದೇನವಾಜರು.

30. ಬಂದೇನವಾಜರ ಉರುಸ್ಸು ಯಾವಾಗ ನಡೆಯುತ್ತದೆ ?
ಉತ್ತರ: ಬಂದೇನವಾಜರ ಉರುಸ್ಸು ಜಖೈದ ತಿಂಗಳ ಹದಿನೈದನೇ ದಿನದಂದು ನಡೆಯುತ್ತದೆ.

## ಭಾಗ – ಬಿ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಪರ್ಯಾಯ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

31. ಹಿಮಾಲಯವನ್ನು – ಪದದಲ್ಲಿರುವ ವಿಭಕ್ತಿ......

ಎ) ದ್ವಿತಿಯಾ ಬಿ) ತೃತಿಯಾ ಸಿ) ಚತುರ್ಥಿ ಡಿ)ಪ್ರಥಮಾ

ಉತ್ತರ: ಎ) ದ್ವಿತಿಯಾ

32. ಅವನು –ಅವರು ಇವು ಇದಕ್ಕೆ ಉದಹರಣೆ..

ಎ) ಅಂಕಿತನಾಮ ಬಿ) ಸರ್ವನಾಮ ಸಿ) ರೂಢನಾಮ ಡಿ) ಕ್ರಿಯಾಪ್ರಕೃತಿ

ಉತ್ತರ: ಬಿ) ಸರ್ವನಾಮ

33. ಆದೇಶ ಸಂಧಿಗೆ ಉದಾಹರಣೆಯಾದ ಪದ

ಎ) ಮಾತಿಲ್ಲ ಬಿ) ಮರವನ್ನು ಸಿ) ಮನದಟ್ಟು ಡಿ) ಸಾವಿನಾಚೆ

ಉತ್ತರ: ಸಿ) ಮನದಟ್ಟು

34. "ಮೈಕೊಡವಿ"ಪದವು ಈ ಸಮಾಸಕ್ಕೆ ಉದಹರಣೆಯಾಗಿದೆ

ಎ) ಕರ್ಮಧಾರೆಯ ಬಿ) ತತ್ಪುರುಷ ಸಿ) ಗಮಕ ಡಿ) ಕ್ರಿಯಾ

ಉತ್ತರ: ಡಿ) ಕ್ರಿಯಾ

35. "ದೀಪದೆದುರಿಗೆ ತಿಮಿರ ಸರಿಯುವಂತೆ" ಈ ವಾಕ್ಯದಲ್ಲಿರುವ ಅಲಂಕಾರ ....

ಎ) ಉಪಮಾ ಬಿ) ರೂಪಕ ಸಿ) ದೃಷ್ಟಾಂತ ಡಿ) ದೀಪಕ

ಉತ್ತರ: ಎ) ಉಪಮಾ

36. 'ಮುಖ' ಪದದ ತದ್ಭವ ರೂಪ

ಎ) ಮುಗಿಲು ಬಿ) ಮೊಗ ಸಿ) ಮಗು ಡಿ) ವದನ

ಉತ್ತರ: ಬಿ) ಮೊಗ

37. ಆರು ಸಾಲಿನ ಪದ್ಯವನ್ನು ಹೀಗೆ ಕರೆಯುತ್ತಾರೆ

ಎ) ಶತಕ ಬಿ) ರಗಳೆ ಸಿ) ಷಟ್ಪದಿ ಡಿ) ಕಂದ

ಉತ್ತರ: ಸಿ) ಷಟ್ಪದಿ

38. ತಿನ್ನು –ಧಾತು ಪದದ ನಿಷೇದಾರ್ಥಕ ರೂಪ

ಎ) ತಿಂದನು ಬಿ) ತಿಂದಿಲ್ಲ ಸಿ) ತಿನ್ನುವುದಿಲ್ಲ ಸಿ) ತಿನ್ನನು

ಉತ್ತರ: ಸಿ) ತಿನ್ನನು

39. ಸಂಗೀತಗಾರ ಪದದ ಅನ್ಯಲಿಂಗರೂಪ

ಎ) ಸಂಗೀತಗಾರ್ತಿ ಬಿ) ಸಂಗೀತಗಾರಿನಿ ಸಿ) ಸಂಗೀತಾ ಡಿ) ಹಾಡುಗಾರ್ತಿ

ಉತ್ತರ: ಸಂಗೀತಗಾರ್ತಿ

40. 'ಧುರ' ಪದದ ಅರ್ಥ

ಎ) ದುಷ್ಟ ಬಿ) ಯುದ್ಧ ಸಿ) ದುಃಖ ಡಿ) ದುಗುಡ

ಉತ್ತರ: ಬಿ) ಯುದ್ಧ

41. 'ದಯೆ' ಪದದ ವಿರುದ್ಧ ಪದ

ಎ) ದುರ್ಗುಣ ಬಿ) ಪ್ರೀತಿ ಸಿ) ನಿರ್ದಯೆ ಡಿ) ಕೆಟ್ಟವ

ಉತ್ತರ: ಸಿ) ನಿರ್ದಯೆ

42. ಹಾದಿಲ್ – ಈ ಪದದ ಗ್ರಾಂಥಿಕ ರೂಪ

ಎ) ದಾರಿಯಲ್ಲಿ ಬಿ) ರಸ್ತೆಯಲ್ಲಿ ಸಿ) ಬೀದಿಯಲ್ಲಿ ಡಿ) ಹಾದಿಯಲ್ಲಿ

ಉತ್ತರ: ಡಿ) ಹಾದಿಯಲ್ಲಿ

**ಭಾಗ – ಸಿ**

**ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ**

43. * ಹಾಸಿಗೆ ಇದ್ದಷ್ಟು ಕಾಲು ಚಾಚು
    * ಅತಿ ಆಸೆ ಗತಿಗೇಡು
    * ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

*** ಹಾಸಿಗೆ ಇದ್ದಷ್ಟು ಕಾಲು ಚಾಚು**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ನಾವು ನಮ್ಮ ಅರ್ಹತೆಗೆ ತಕ್ಕ ಗುರಿಯನ್ನು, ಆಸೆಯನ್ನು ಹೊಂದಿರಬೇಕು. ಇಲ್ಲದಿದ್ದರೆ ತಿರುಕ ಕಂಡ ಕನಸಿನಂತೆ ಕನಸು ಕನಸಾಗಿಯೇ ಉಳಿಯುತ್ತದೆ. ಮುಂದೆ ಪಡಬಾರದ ಕಷ್ಟವನ್ನು ಪಡಬೇಕಾಗುತ್ತದೆ. ಆದ್ದರಿಂದ ಹಣವನ್ನು ದುಂದುವೆಚ್ಚ ಮಾಡಬಾರದು. ನ್ಯಾಯಯುತವಾಗಿ ಸಂಪಾಧಿಸಿದ ಸಂಪಾದನೆಯಲ್ಲಿಯೇ ಜೀವನ ನಡೆಸಬೇಕು ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**ಅಥವಾ**

*** ಅತಿ ಆಸೆ ಗತಿಗೇಡು**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ಮನುಷ್ಯನಿಗೆ ಆಸೆ ಇರಬೇಕು, ಆದರೆ ದುರಾಸೆ ಇರಬಾರದು. ಅತಿಯಾದ ಅಸೆ ದುಃಖಕ್ಕೆ ಕಾರಣವಾಗಿ ಇರುವುದನ್ನು ಕಳೆದುಕೊಂಡು ಗತಿಹೀನರನ್ನಾಗಿ ಮಾಡುತ್ತದೆ. ಉದಾ – ಊಟ ಬಹಳ ರುಚಿಯಾಗಿದೆ ಎಂದು ಹೆಚ್ಚು ತಿಂದರೆ ಅಜೀರ್ಣವಾಗುತ್ತದೆ. ಖ್ಯಾತ ಕವಿ ಡಿ.ವಿ.ಜಿ ಅವರು ಹೇಳುವಂತೆ ಜೀವನದಲ್ಲಿ ಅತಿ ಎಂಬುದು ಎಲ್ಲಿಯೂ ಇಲ್ಲದಿದ್ದರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ಆದ್ದರಿಂದ ಅತಿ ಆಸೆ ಹೊಂದದೆ ಇದ್ದುದರಲ್ಲಿಯೇ ತೃಪ್ತರಾಗಿರಬೇಕು ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

**ಅಥವಾ**

*** ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ಕುಂಬಾರ ಮಣ್ಣನ್ನು ತಂದು ಹದ ಮಾಡಿ ಮಡಿಕೆ ಮಾಡಲು ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಆದರೆ ಅದನ್ನು ಒಡೆದು ಹಾಕಲು ದೊಣ್ಣೆಗೆ ಒಂದೆ ನಿಮಿಷ ಸಾಕಾಗುತ್ತದೆ. 'ಕಟ್ಟುವುದು ಕಠಿಣ ಕೆಡಿಸುವುದು ಸುಲಭ' ಎನ್ನುವ ಹಾಗೆ ಒಳ್ಳೆಯ ಕಾರ್ಯಮಾಡಿ ಸಮಾಜದಲ್ಲಿ ಉನ್ನತಿಯನ್ನು ಸಾಧಿಸಲು ತುಂಬಾ ಶ್ರಮಿಸ ಬೇಕಾಗುತ್ತದೆ. ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

44. ಧಾರವಾಡ ಸರಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ಆಯೇಷಾ ಎಂದು ತಮ್ಮನ್ನು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಕೈಗೊಂಡ ವನಮಹೋತ್ಸವ ಕಾರ್ಯಕ್ರಮ ಕುರಿತು ನಿಮ್ಮ ಗೆಳತಿ ಕೌಸರ ಸರಕಾರಿ ಪ್ರೌಢ ಶಾಲೆ ಬೆಳಗಾವಿ ಇವರಿಗೆ ಪತ್ರ ಬರೆಯಿರಿ.

ಇವರಿಂದ
ಆಯೇಶಾ 10ನೇ ತರಗತಿ
ಸ. ಪ್ರೌ. ಶಾಲೆ ಧಾರವಾಡ
ದಿನಾಂಕ 10.02.2017

ಇವರಿಗೆ
ಕೌಸರ್ 10ನೇ ತರಗತಿ
ಸ. ಪ್ರೌ. ಬೆಳಗಾವಿ

ಆತ್ಮೀಯ ಗೆಳತಿ ಕೌಸರ್‌ಳಿಗೆ ಆಯೇಶಾ ತಿಳಿಸುವ ವಂದನೆಗಳು. ಈಗ ಪತ್ರ ಬರೆಯಲು ಕಾರಣವೆಂದರೆ ನಾನೂ ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ನಮ್ಮ ಶಾಲೆಯಲ್ಲಿ ವನಮಹೋತ್ಸವ ಕಾರ್ಯಕ್ರಮ ಹಮ್ಮಿಕೊಂಡು ಮರಗಳನ್ನು ನೆಟ್ಟೆವು. ಶಿಕ್ಷಕರ ಮಾರ್ಗದರ್ಶನದಲ್ಲಿ ನಗರದ ಅನೇಕ ಬಡಾವಣೆಗಳಿಗೆ ಹೋಗಿ ಹಾಡು, ಬೀದಿ ನಾಟಕಗಳ ಮೂಲಕ ಜನರಲ್ಲಿ ವನಮಹೋತ್ಸವದ ಅರಿವು ಮೂಡಿಸಿದೆವು. ನಮ್ಮ ಶಾಲೆಯಲ್ಲಿ ಹಮ್ಮಿಕೊಂಡ ವನಮಹೋತ್ಸವ ಕಾರ್ಯಕ್ರಮ ಮನಸ್ಸಿಗೆ ಸಂತೋಷವನ್ನು ತಂದಕೊಟ್ಟಿತು. ನಿನ್ನ ಅಭ್ಯಾಸ ಹಾಗೂ ಆರೋಗ್ಯವನ್ನು ಕುರಿತು ಪತ್ರವನ್ನು ಬರೆದು ತಿಳಿಸು.

ವಂದನೆಗಳು

ಸ್ಥಳ – ಧಾರವಾಡ

ನಿನ್ನ ಆತ್ಮೀಯ ಗೆಳತಿ
ಆಯೇಶಾ

**ಅಥವಾ**

ರಾಜಾಜಿನಗರ 3ನೇ ಬ್ಲಾಕ್ ಬಳ್ಳಾರಿಗೆ ಸೇರಿದ ಬಡಾವನೆಯ ನಿವಾಸಿ ತೇಜಸ್ ಎಂದು ತಮ್ಮನ್ನು ಭಾವಿಸಿಕೊಂಡು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಕರಿತು ಆಯುಕ್ತರು, ನಗರಸಭೆ ಬಳ್ಳಾರಿ ಇವರಿಗೆ ಮನವಿ ಪತ್ರ ಬರೆಯಿರಿ.

ಇವರಿಂದ
ತೇಜಸ್
ರಾಜಾಜಿನಗರ 3ನೇ ಬ್ಲಾಕ್
ಬಳ್ಳಾರಿ
ದಿನಾಂಕ 10.04.2018

ಇವರಿಗೆ
ಮಾನ್ಯ ಆಯುಕ್ತರು
ನಗರ ಸಭೆ
ಬಲ್ಳಾರಿ

ವಿಷಯ – ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಕರಿತು.

ಮಾನ್ಯರೇ

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಜನರು ನೀರಿಗಾಗಿ ತುಂಬಾ ಪರದಾಡುವಂತಾಗಿದೆ. ಕೊಳವೆಬಾವಿ ಅಥವಾ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಮ್ಮಲ್ಲಿ ವಿನಂತಿ.

ವಂದನೆಗಳು

ಸ್ಥಳ – ರಾಜಾಜಿನಗರ ಬಳ್ಳಾರಿ.

ತಮ್ಮ ವಿಶ್ವಾಸಿಕರು
ತೇಜಸ್

**ಕೆಳಗಿನ ಯಾವುದಾದರೊಂದು ವಿಷಯ ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ**

45. * ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ.
* ಸಮೂಹ ಮಾಧ್ಯಮಗಳು.
* ಕ್ರೀಡೆಗಳ ಮಹತ್ವ:

**ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ:**

ಪೀಠಿಕೆ – ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ.

ವಿವರಣೆ – ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳುಮಾಡುತ್ತಿದ್ದಾನೆ. ಇದಕ್ಕೆ ಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕ ರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.

ಉಪಸಂಹಾರ – ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

ಅಥವಾ

**ಸಮೂಹ ಮಾಧ್ಯಮಗಳು:**

ಪೀಠಿಕೆ – ಹಲವು ಜನರನ್ನು ಏಕಕಾಲದಲ್ಲಿ ಸಂಪರ್ಕ ಕಲ್ಪಿಸುವ ಮಾಧ್ಯಮಗಳನ್ನು ಸಮೂಹ ಮಾಧ್ಯಮಗಳೆಂದು ಕರೆಯುವರು. ಆಧುನಿಕ ಯುಗದಲ್ಲಿ ಇವುಗಳ ಅವಶ್ಯಕತೆ ತುಂಬಾ ಹೆಚ್ಚಾಗಿದೆ. ಇವುಗಳಿಲ್ಲದ ಜೀವನ ಕಲ್ಪಿಸಿಕೊಳ್ಳಲು ಸಾಧ್ಯವಾಗದ ಮಟ್ಟಿಗೆ ಮನುಷ್ಯನ ಬದುಕಿನಲ್ಲಿ ಇವು ಬೆಸೆದುಕೊಂಡಿವೆ. ಇವುಗಳ ಬಳಕೆಯಿಂದ ಜಗತ್ತು ಸಣ್ಣದಾಗಿದೆ ಎಂದು ಅನಿಸುತ್ತದೆ.

ವಿವರಣೆ – ದಿನಪತ್ರಿಕೆ, ರೇಡಿಯೊ, ದೂರದರ್ಶನ, ದೂರವಾಣಿ, ಚಲನಚಿತ್ರ, ಅಂತರ್ಜಾಲ ವ್ಯವಸ್ಥೆ, ಟ್ವೀಟರ್, ಫೇಸಬುಕ್, ವಾಟ್ಸಪ್ ಇನ್ನು ಮುಂತಾದವುಗಳು ಸಮೂಹ ಮಾಧ್ಯಮಗಳಾಗಿವೆ. ಇವು ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯವಾಗಿ ಜನರ ಸಂಪರ್ಕವನ್ನು ಬೆಸೆಯುತ್ತಿವೆ. ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ದೃಷ್ಟಿಯಿಂದ ಇವುಗಳ ಪಾತ್ರ ಮಹತ್ವದ್ದಾಗಿದೆ. ದೇಶದ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆಗಳು, ಕ್ರೀಡೆಗಳು, ಉಪನ್ಯಾಸಗಳನ್ನು ನಾವು ಕುಳಿತಲ್ಲೆ ನೋಡುವ, ಕೇಳುವ ಅವಕಾಶ ಇವುಗಳಿಂದ ದೊರಕಿದೆ. ಆದ್ದರಿಂದ ವಿದ್ಯಾರ್ಥಿಯನ್ನೊಳಗೊಂಡ ಎಲ್ಲರಿಗೂ ಇವುಗಳ ಅವಶ್ಯಕತೆ ಬಹಳಷ್ಟಿದೆ ಎಂದು ಹೇಳಬಹುದು.

ಉಪಸಂಹಾರ – ಒಟ್ಟಾರೆಯಾಗಿ ಅಧುನಿಕ ಯುಗದಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ. ಇವುಗಳನ್ನು ಸಕಾರಾತ್ಮಕವಾಗಿ ಯೋಚಿಸಿ ಒಳ್ಳೆಯ ಕಾರ್ಯಕ್ಕೆ ಬಳಸಿಕೊಳ್ಳಬೇಕು.

**ಅಥವಾ**

## ಕ್ರೀಡೆಗಳ ಮಹತ್ವ:

ಪೀಠಿಕೆ – 'ಆರೋಗ್ಯವೇ ಭಾಗ್ಯ' ನಾಣ್ಣುಡಿಯಂತೆ ಕ್ರೀಡೆಗಳು ಆಧುನಿಕತೆಯಲ್ಲಿ ಬಹಳ ಪ್ರಾಮುಖ್ಯತೆ ಪಡೆದುಕೊಂಡಿವೆ. ಸದೃಢ ದೇಹದಲ್ಲಿ ಸದೃಢ ಮನಸ್ಸು ರೂಪಗೊಳ್ಳುತ್ತದೆ. ಆದ್ದರಿಂದ ಪಾಠದ ಜೊತೆಗೆ ಆಟವು ಬೇಕಾಗಿದೆ.

ವಿವರಣೆ – ಇಂದು ಮಾನವನ ಬದುಕು ಯಾಂತ್ರಿಕ ಬದುಕಾಗಿದೆ. ಜೀವನದಲ್ಲಿ ಉತ್ಸಾಹ ತುಂಬಲು ಮಕ್ಕಳಿಂದ ಹಿಡಿದು ವೃದ್ಧರೆಲ್ಲರಿಗೂ ಕ್ರೀಡೆಗಳು ಅವಶ್ಯಕವಾಗಿವೆ. ನಮಗೆ ಇಷ್ಟವಾದ ಕ್ರಿಡೆಯನ್ನು ಆಯ್ಕೆಮಾಡಿಕೊಂಡು ಸತತವಾಗಿ ಪ್ರಯತ್ನಮಾಡಿದರೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಹೆಸರು ಗಳಿಸಬಹುದು. ಇದಕ್ಕೆ ಉತ್ತಮ ಉದಾಹರಣೆಯಾಗಿ ರಾಹುಲ್ ದ್ರಾವಿಡ್, ಅನೀಲ ಕುಂಬ್ಳೆ ಮುಂತಾದವರು ನಮ್ಮ ಕಣ್ಮುಂದೆ ಇದ್ದಾರೆ. ಮಗು ಕ್ರೀಡೆಯಲ್ಲಿ ಭಾಗಿಯಾಗುವುದರಿಂದ ಏಕಾಗ್ರತೆ, ಚುರುಕುತನ, ತತಕ್ಷಣದಲ್ಲಿ ಪ್ರತಿಕ್ರಿಯಿಸುವ ಮನೋಭಾವ ಹಾಗೂ ನಾಯಕತ್ವದ ಗುಣಗಳು ಬೆಳೆದು ಪರಿಪೂರ್ಣ ವ್ಯಕ್ತಿತ್ವ ಹೊಂದಲು ಸಾಧ್ಯವಾಗುತ್ತದೆ.

ಉಪಸಂಹಾರ – ಒಟ್ಟಾರೆಯಾಗಿ ಕ್ರೀಡೆಗಳು ಮಾನವನ ಬದುಕಿನ ಒಂದು ಅಂಗವಾಗಿವೆ. ನಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದಿರುವ ಜನಪದ ಕ್ರೀಡೆಗಳನ್ನು ಉಳಿಸಿ ಬೆಳೆಸುವ ಹೊಣೆ ನಮ್ಮದಾಗಬೇಕಿದೆ.

# ದ್ವಿತೀಯ ಭಾಷೆ ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ 2

**ಹತ್ತನೇ ತರಗತಿ** **ಅಂಕಗಳು – 80** **ಅವಧಿ: 2.30ಗಂಟೆ**

**ಸೂಚನೆಗಳು:** ಪ್ರಶ್ನೆಪತ್ರಿಕೆಯು ಎ. ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಗಳನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

## ಭಾಗ – ಎ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**

1. ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?
ಉತ್ತರ: ಜಿಂಕೆಯು ಬೇಡನ ಬಾಣದ ಹೊಡೆತವನ್ನು ತಪ್ಪಿಸಿಕೊಂಡಿತು ಆದ್ದರಿಂದ ವಿಷದ ಭಾಣವು ಮರಕ್ಕೆ ತಗುಲಿತು.

2. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
ಉತ್ತರ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗ ಜಂಗಮ' ಎಂದು ಖಾತರಾಗಿದ್ದಾರೆ.

3. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?
ಉತ್ತರ: ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಅರಿತುಕೊಂಡು ಅವರ ಅಭಿಲಾಷೆಗೆ ತಕ್ಕ ಜ್ಞಾನ ಕೊಡುವ ಶಕ್ತಿ ಇರುತ್ತದೆ.

4. ಹಕ್ಕಿ ಗೂಡಿನಲ್ಲಿ ಯಾವ ಸಮನ್ವಯತೆ ಇದೆ ?
ಉತ್ತರ: ಹಕ್ಕಿ ಗೂಡುಗಳಲ್ಲಿ ಕಲಾವಿದನ ಸೃಜನ ಸಾಮರ್ಥ್ಯ ಹಾಗೂ ವಿಜ್ಞಾನಿಯ ತಂತ್ರಜ್ಞಾನ ಸಮನ್ವಯಗೊಂಡಿದೆ.

5. ಹೆಡ್ ಮಾಸ್ತರರು ಸಂತೋಷಗೊಂಡದ್ದು ಏಕೆ ?
ಉತ್ತರ: ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು ಹೆಡ್ ಮಾಸ್ತರರು ಸಂತೋಷಗೊಂಡರು.

6. ಏಣಿಯು ಜನರಿಗೆ ಮಾಡಿದ ಉಪಕಾರವೇನು ?
ಉತ್ತರ: ಮೇಲೇರುವವರಿಗೆ ಆಸರೆಯಾಗಿ ಮೇಲಕ್ಕೆ ಹತ್ತಲು ಸಹಾಯ ಮಾಡುತ್ತದೆ.

7. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?
ಉತ್ತರ: ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಬಗೆಬಗೆಯ ಬಣ್ಣಗಳಿಂದ ಬರೆದ ಚಿತ್ರದ ಹಾಗೆ ಸಿಂಗಾರಗೊಳ್ಳುತ್ತಾಳೆ.

8. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?
ಉತ್ತರ: ಸುರರ ಸತಿಯರ ಸ್ಥಾನವನ್ನು ಅರಮನೆಯ ನಾರಿಯರು ತುಂಬುತ್ತಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ**

9. ಗಿಳಿಯು ಇಂದ್ರನನ್ನು ಯಾವ ವರವನ್ನು ಕೇಳಿತು ?
ಉತ್ತರ: ಗಿಳಿಯು ಇಂದ್ರನಲ್ಲಿ ತಾನು ವಾಸವಾಗಿರುವ ಮರವು ಮೊದಲಿನಂತೆ ಹಸಿರಿನಿಂದ ಕಳಕಳಿಸುವ, ಫಲ ಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸಬೇಕೆಂದು ಕೇಳಿತು.

10. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?

ಉತ್ತರ: ಹಕ್ಕಿಗಳು ತಮಗಿರುವ ಅಪೂರ್ವವಾದ ಹಾರಾಟ ಶಕ್ತಿಯಿಂದ ಸಾಗರದ್ವೀಪ, ಗಿರಿಶಿಖರಗಳ ನೆತ್ತಿ, ನಿರ್ಜನ ವನಶ್ರೇಣಿ, ಕಗ್ಗತ್ತಲ ಕಣಿವೆ, ಹಿಮಶೀತಲ ಧೃವ ಪ್ರದೇಶ ಎಲ್ಲೆಂದರಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ.

11. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

ಉತ್ತರ. ಹಿರಿಯ ವಿದ್ಯಾರ್ಥಿಗಳು ತಮ್ಮ-ತಮ್ಮ ಜೀವನದ ತೊಂದರೆಗಳ ಬಗ್ಗೆ 'ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೆ ಇಲ್ಲ. ಮಕ್ಕಳು ಬೆಳೆಯುತ್ತಿದ್ದಾರೆ, ಅವರನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗಿದೆ' ಎಂದು ಹೆಡ್ ಮಾಸ್ತರರ ಬಳಿ ಹಿರಿಯ ವಿದ್ಯಾರ್ಥಿಗಳು ತಮ್ಮ ಕಷ್ಟಗಳ ಸರಮಾಲೆಯನ್ನು ಹೇಳಿಕೊಳ್ಳುತ್ತಿದ್ದರು.

12. ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ?

ಉತ್ತರ. ಥೇಮ್ಸ್ ನದಿಯ ದಕ್ಷಿಣಕ್ಕೆ ಉದ್ಯಮಗಳು, ಫ್ಯಾಕ್ಟರಿಗಳು ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿದವರು ವಾಸಿಸುತ್ತಾರೆ. ಒಟ್ಟಾರೆಯಾಗಿ ಥೇಮ್ಸ್ ನದಿ ದಂಡೆಯ ಬದಿಯಲ್ಲಿ ಶ್ರೀಮಂತರೇ ವಾಸಿಸುತ್ತಾರೆ.

13. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು ?

ಉತ್ತರ: ಥೇಮ್ಸ್ ನದಿಯ ಮೇಲೆ ಹದಿಮೂರು ಬ್ರಿಜ್‌ಗಳಿವೆ ಅದರಲ್ಲಿ ಟವರ್ ಬ್ರಿಜ್ ಪ್ರಮುಖವಾದುದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದುವರೆ ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿ ಕೊಡುತ್ತದೆ.

14. ಏಣಿಯು ಹೇಳಿಕೊಳ್ಳುವ ಕಷ್ಟಗಳೇನು ?

ಉತ್ತರ: ಏಣಿಯು ತನ್ನ ಮೇಲೆ ಭಾರ ಹಾಕಿ ಜನರು ಮೇಲೇರುವಾಗ 'ಒಂದೊಂದು ಹಜ್ಜೆಯ ಭಾರ ಹೊರುವಾಗ ನಾ ಪಟ್ಟಪಾಡು ನನಗೆ ಗೊತ್ತು' ಎಂದು ಕಷ್ಟವನ್ನು ಹೇಳಿಕೊಳ್ಳುತ್ತದೆ.

15. ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ ?

ಉತ್ತರ: ಚೈತ್ರದಲ್ಲಿ ಪ್ರಕೃತಿ ಎಲ್ಲೆಲ್ಲೂ ಹಸುರಿನಿಂದ ಕಂಗೊಳಿಸುತ್ತಿರುತ್ತದೆ. ಒಣಗಿ ನಿಂತ ಮರಗಳು ಹೊಸ ಚಿಗುರಿನಿಂದ, ಫಲ ಪುಷ್ಪಗಳಿಂದ ಕಂಗೊಳಿಸುತ್ತವೆ. ಮರಗಳಲ್ಲಿ ಚಿಗುರು ಮುಗುಳ್ನಗುವುದನ್ನು ಕಂಡ ಕೋಗಿಲೆ ತನ್ನ ಮಧುರ ಕಂಠದಿಂದ ಸ್ವರ ತಾರಕಕ್ಕೇರುವಂತೆ ಕೂಗುತ್ತಿರುವಾಗ ಹಕ್ಕಿಗಳು ಮತ್ತೇರಿದಂತೆ ಚಿಲಿಪಿಲಿಗುಟ್ಟುತ್ತವೆ.

16. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿಯು ನೀಡುವ ಹೇಳಿಕೆಗಳಾವುವು ?

ಉತ್ತರ: ಕರ್ಪೂರವು ತಟ್ಟೆಯೊಳಗೆ ಕರಗುವಂತೆ, ದೀಪದೆದುರು ಕತ್ತಲೆ ನಿಲ್ಲದೆ ಸರಿದು ಹೋಗುವಂತೆ, ಹಡಗು ಬಂದರನ್ನು ಸೇರಿ ಶಾಂತವಾಗಿ ನಿಲ್ಲುವಂತೆ, ರವಿ ಕಿರಣಕ್ಕೆ ಸದ್ದಿಲ್ಲದೆ ಕರಗಿ ನೀರಾಗುವ ಇಬ್ಬನಿಯಂತೆ ನೀನು ಬದುಕಿನಲ್ಲಿ ಸದ್ದಿಲ್ಲದೆ ಬಾಳಬೇಕು ಎಂದು ಕವಿ ತಿಳಿಯಹೇಳಿದ್ದಾರೆ.

17. ಭಾವ ಬಣ್ಣದ ಸೀರೆಯನ್ನು ತಂದದ್ದು ಏಕೆ?

ಉತ್ತರ: ಕೆರೆಗಳು ತುಂಬಿದಾಗ ಬಾಗಿನ ಅರ್ಪಿಸುವ ವಾಡಿಕೆ ಈಗಲೂ ಇದೆ. ಈ ಸಂದರ್ಭದಲ್ಲಿ ಪೂಜಾ ಸಾಮಗ್ರಿಗಳೊಂದಿಗೆ ಸೀರೆ, ಕುಪ್ಪಸ, ಹಣ್ಣು ಹಂಪಲುಗಳನ್ನು ಮೊರದಲ್ಲಿಟ್ಟು ನೀರಿಗೆ ಬಿಡಲಾಗುತ್ತದೆ. ಕೆರೆ ತುಂಬಿದ ಖುಷಿಗೆ ಭಾವನು ಬಾಗಿನ ಅರ್ಪಿಸಲು ಬಣ್ಣದ ಸೀರೆಯನ್ನು ತಂದಿರುತ್ತಾನೆ.

18. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ?

ಉತ್ತರ: ವೈದ್ಯರು ಮಗವಿನ ನಾಡಿಯನ್ನು ಹಿಡಿದು ನೋಡಿದರು. ಜ್ವರದ ತೀವ್ರತೆಯನ್ನು ಗುರುತಿಸಿ ಔಷದಿ ಮಾತ್ರೆಗಳನ್ನು ಕುಡಿಸಿದರು. ವೈದ್ಯರಿಗೆ ಭೀಮನಾಯಕನ ಮಗನ ಪ್ರಾಣ ಉಳಿಸಲು ಒಂದು ಸೊಪ್ಪು ಬೇಕಾಗಿತ್ತು. ಕಾಡಿನಲ್ಲಿ ಸೊಪ್ಪನ್ನು

ಹುಡಕಲು ಹೋದರು. ಸೊಪ್ಪು ಕಣ್ಣಿಗೆ ಬಿದ್ದಾಗ ಕುಣಿದಾಡಿದರು. ಸೊಪ್ಪನ್ನು ಅರೆದು ಮತ್ತೊಮ್ಮೆ ಔಷದ ಕುಡಿಸಿದರು. ಕುಪ್ಪೆಯಲ್ಲಿದ್ದ ಲೇಹವನ್ನು ಹಣೆಯತುಂಬ ಬಳಿದರು ಹೀಗೆ ಔಷಧೋಪಚಾರ ಮಾಡಿ ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದರು.

19. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ ?
ಉತ್ತರ: ಈ ಲೋಕವು ಬಣ್ಣದ ಚಿಟ್ಟೆಗಳು ಹಾರಿ ಭೃಂಗದ ಸಂಗೀತ ಕೇಳಿ ಆನಂದಿಸುವಂತೆ, ಹಾಗೂ ಗಮ ಗಮಿಸೋ ಹೂವಿನ ಗಮಲಿನಲ್ಲಿ ಅಡಗಿ ಕುಳಿತಂತೆ ಸಂತೋಷದಾಯಕವಾಗಿದೆ ಎಂದು ಕವಯತ್ರಿ ಹೇಳುತ್ತಾರೆ.

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ**

20. ಏಕಾಂಗಿ ವೀರನಂತೆ **ಮಧ್ಯ ರಾತ್ರಿ ಎದ್ದನು**
**ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು**
**ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು**
**ಗೊತ್ತು ಗುರಿಯು ಇಲ್ಲದಂತೆ** ಕತ್ತಲ್ಲಿ ನಡೆದನು

**ಅಥವಾ**

ಕಾಡು ಕಾಡು **ಅಲೆದ ಅವಗೆ ನಾಡಿನರ್ಥ ಹೊಳೆಯಿತು**
**ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು**
**ಬೆಳ್ಳಿ ಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು**
**ಬೋಧಿವೃಕ್ಷದಲ್ಲಿ** ಮಹಾಬೆಳಕೊಂದು ಕಂಡಿತು

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ**

21. 'ಅವನು ಬಂದರೆ ಕರೆದುಕೊಂಡು ಹೋಗು ತಾಯಿ'

ಹೇಳಿಕೆ : ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ರವರು ಬರೆದ ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಪುಟ್ಟರಾಜರನ್ನು ಕುರಿತು ಪಂಚಾಕ್ಷರಿ ಗುರುಗಳು ಸಿದ್ಧಮ್ಮ ತಾಯಿಗೆ ಹೇಳಿದ ಮಾತು ಇದಾಗಿದೆ.
ವಿವರಣೆ : ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆಆಲೂರಿನಲ್ಲಿ ಕ್ಯಾಂಪ ಹಾಕಿತ್ತು. ಆ ಸಂದರ್ಭದಲ್ಲಿ ತಾಯಿ ಸಿದ್ಧಮ್ಮನವರು ಮಗನನ್ನು ಕಾಣಲು ಬಂದರು. ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮಗನನ್ನು ನೋಡಿ ಸಂತಸಪಟ್ಟರು. ಗುರುಗಳಿಗೆ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಕೇಳಿಕೊಂಡರು. ಆಗ ಗುರುಗಳು 'ಅವನು ಬಂದರೆ ಕರೆದುಕೊಂಡು ಹೋಗು ತಾಯಿ' ಎಂದು ಹೇಳುತ್ತಾರೆ.

22. 'ನೀರ ಕಂಡಲ್ಲಿ ಮುಳುಗುವರಯ್ಯಾ'

ಹೇಳಿಕೆ: ಈ ಸಾಲನ್ನು ಬಸವಣ್ಣನವರ ವಚನದಿಂದ ಆರಿಸಲಾಗಿದೆ. ಆಕರ ಗ್ರಂಥ – ಕರ್ನಾಟಕ ಸರ್ಕಾರದ ಸಮಗ್ರ ವಚನ ಸಂಪುಟ.

ಸಂದರ್ಭ: ಬಸವಣ್ಣನವರು ಸಮಾಜದಲ್ಲಿದ್ದ ಮೂಡನಂಬಿಕೆಯನ್ನು ಖಂಡಿಸುತ್ತಾ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ನೀರಕಂಡಲ್ಲಿ ಮುಳುಗುವರಯ್ಯ, ಮರನ ಕಂಡಲ್ಲಿ ಸುತ್ತುವರಯ್ಯಾ ಇದು ಧಾರ್ಮಿಕ ಮೂಢನಂಬಿಕೆಯಾಗಿದೆ. ನೀರು ಮರಗಳು ದೇವರೆಂದು ನಂಬುವುದು ಸರಿಯಲ್ಲ. ಹುಟ್ಟು-ಸಾವುಗಳಿಲ್ಲದ

ಪರಮಾತ್ಮನು ವಿಶ್ವದ ತುಂಬೆಲ್ಲಾ ತುಂಬಿರುವನು, ಅವನನ್ನು ನಿಷ್ಠೆಯಿಂದ, ಭಕ್ತಿಯಿಂದ ಪೂಜಿಸಬೇಕು ಎಂದು ಗುರುಬಸವಣ್ಣನವರು ಆದೇಶಿಸುತ್ತಾರೆ.

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ವಾಕ್ಯ ರೂಪದಲ್ಲಿ ಬರೆಯಿರಿ**

23. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು

ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು 1951ರಲ್ಲಿ ಜನಿಸಿದ ಇವರು ಸಾಣೆಹಳ್ಳಿಯಲ್ಲಿ ರಂಗಶಾಲೆಯನ್ನು ಸ್ಥಾಪಿಸಿ ಪ್ರತಿವರ್ಷ ರಾಷ್ಟ್ರೀಯ ನಾಟಕೋತ್ಸವ, ಶಿವಸಂಚಾರ, ವರ್ಷದ ಹರ್ಷ, ಶ್ರಾವನಸಂಜೆ ಕಾರ್ಯಕ್ರಮಗಳನ್ನು ಸಂಘಟಿಸುತ್ತಾಬಂದಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ ಜೀವನ ದರ್ಶನ, ಕೈದೀವಿಗೆ, ಹುಟ್ಟುಸಾವುಗಳ ಮಧ್ಯೆ, ಸಮಾದಿಯ ಮೇಲೆ, ಕಾಯಕ ದಸೋಹ, ಸುಖ ಎಲ್ಲಿದೆ? ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಪ್ರಶಸ್ತಿಗಳು – ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಫೆಲೋಷಿಪ್, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಹಾಗೂ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯು ಪಾಲ್ ಹ್ಯಾರಸ್ ಪ್ರಶಸ್ತಿ ನೀಡಿ ಗೌರವಿಸಿದೆ.

24. ಕುಮಾರವ್ಯಾಸ

ಗದಗ ಜಿಲ್ಲೆಯ ಕೋಳಿವಾಡದಲ್ಲಿ ಜನಿಸಿದ ಇವರ ಕಾಲ 1430 ಎಂದು ತಿಳಿದು ಬರುತ್ತದೆ. ಗದುಗಿನ ವೀರನಾರಾಯಣನನ್ನು ಆರಾಧ್ಯ ದೈವವನ್ನಾಗಿಸಿಕೊಂಡ ಇವನು ಕರ್ನಾಟ ಭಾರತ ಕಥಾಮಂಜರಿ(ಗದುಗಿನ ಭಾರತ), ಐರಾವತ ಕೃತಿಗಳನ್ನು ರಚಿಸಿದ್ದಾನೆ. ಕಾವ್ಯದಲ್ಲಿ ರೂಪಕ ಅಲಂಕಾರವನ್ನು ಅಧೀಕವಾಗಿ ಬಳಸಿದ್ದರಿಂದ ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂಬ ಅಭಿದಾನಕ್ಕೆ ಪಾತ್ರನಾಗಿದ್ದಾನೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

25. ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ ?

ಉತ್ತರ: 'ಗಿರಿವನ ಪ್ರೀತಿತಾಂ ದೈವ ಕೃಪೆದಲ್ಲ್ ಜಗದೀಶ್ವರನ ಮಹೀಮೆ ಸಂವೇದಹುದಿಲ್ಲಿ' ಎಂದು ಹೇಳುವ ರಸಋಷಿ ಕುವೆಂಪುರವರು ಪ್ರಸ್ತುತ ಪಾಠದಲ್ಲಿ ಪ್ರಕೃತಿಯನ್ನು ಬಹಳ ಸುಂದರವಾಗಿ ವರ್ಣಿಸಿದ್ದಾರೆ. ಗೋಪಾಲನ ತಾಯಿ ಮಗನನ್ನು ಎಬ್ಬಿಸಿ ಬನಕ್ಕೆ ಹೂಗಳನ್ನು ತರಲು ಕಳುಹಿಸುವಾಗ ಸೂರ್ಯನು ತನ್ನ ಹೊಂಗಿರನಗಳಿಂದ ತೊಳುಗುತ್ತಿದ್ದಾನೆ. ಹಕ್ಕಿಗಳು ಹಾರಾಡುತ್ತಾ ನಿನ್ನನ್ನು ಕರೆಯುತ್ತಿವೆ. ಬನದ ಹೂಗಳು ನಿನಗಾಗಿ ಅರಳಿ ನಿಂತಿವೆ ಎಂದು ಹೇಳುತ್ತಾಳೆ. ಗೋಪಾಲ ಬನಕ್ಕೆ ಹೋದಾಗ ಅಲ್ಲಿರುವ ಮಲ್ಲಿಗೆ, ಸಂಪಿಗೆ, ಕೇದಗೆ, ಪರ್ವತಬಾಳೆ ಮುಂತಾದ ಬಣ್ಣ ಬಣ್ಣದ ಹೂಗಳು, ಸಾವಿರಾರು ಮಳೆ ಬಿಲ್ಲುಗಳು ಸೇರಿ ಕಣಿದ್ದಂತೆ ಕಾಣಿಸುತ್ತಿದ್ದವು. ಹಕ್ಕಿಗಳ ಇಂಪಾದ ಗಾನ, ತಂಗಾಳಿ, ಸೂರ್ಯನ ಹೊಂಬೆಳಕು, ಹಸುರಾದ ಚಿಗುರು ಹುಲ್ಲಿನ ಮೇಲೆ ಕೋಟ್ಯಾಂತರ ಹಿಮಮಣಿಗಳು ಇವೆಲ್ಲವನ್ನು ಕಂಡ ಗೋಪಾಲನಿಗೆ ತಾಯಿ ಜೊತೆಗಿದ್ದರೆ ಆ ಬನವೇ ಸೊಗಸು ಎಂದು ಎನಿಸಿತು.

**ಅಥವಾ**

❖ ಗೋಪಾಲನಿಗೆ ಇದ್ದ ಕಷ್ಟವೇನು ? ಅದು ಹೇಗೆ ಪರಿಹಾರವಾಯಿತು ?

ಉತ್ತರ. ಗೋಪಾಲನು ಶಾಲೆಯಿಂದ ಮನೆಗೆ ಬರುವಾಗ ಕಾಡು ದಾಟಿ ಬರಬೇಕು. ನೆರೆಯೂರಿನಿಂದ ಬರುವ ರಾಮು, ಕಿಟ್ಟಿ, ಮಾಧು, ನಾಣಿ ಇವರಿಗೆಲ್ಲ ಒಬ್ಬೊಬ್ಬ ಆಳುಗಳಿರುತ್ತಾರೆ. ತನಗೆ ಯಾರೂ ಇಲ್ಲವೆಂಬುದು ಗೋಪಾಲನಿಗೆ ಒದಗಿದ ಕಷ್ಟವಾಗಿದೆ. ಇದನ್ನು ತಾಯಿಯ ಮುಂದೆ ಹೇಳಿಕೊಂಡಾಗ ಅವರೆಲ್ಲ ಶ್ರೀಮಂತರ ಮಕ್ಕಳು, ನಾವು ಬಡವರು ನೂಲೂ ಮಾರಿ ಬಂದ ಮೂರು ಕಾಸಿನಲ್ಲಿ ಮನೆ ನಡೆಯಬೇಕು ಕಂದಾ ಆ ಭಗವಂತ ಕೊಡಬೇಕು ನಾವು ಉಣಬೇಕು. ನಿನಗೆ ಕಾಡಿನಲ್ಲಿ ಹೆದರಿಕೆಯಾದರೆ ನಿನ್ನ ಅಣ್ಣ ಕಾಡಿನಲ್ಲಿಯೇ ಇರುತ್ತಾನೆ ಅವನನ್ನು ಕರೆ ಎಂದು

ಹೇಳುತ್ತಾಳೆ. ತಾಯಿ ಹೇಳಿದಂತೆ ಕಾಡಿನಲ್ಲಿ ಹೆದರಿಕೆಯಾದಾಗ ಅಣ್ಣಾ, ಅಣ್ಣಾ ಎಂದು ಕರೆಯುತ್ತಾನೆ. ಆಗ ಬನದ ಗೋಪಾಲನು ಬಂದು ಕಾಡನ್ನು ದಾಟಿಸುತ್ತಾನೆ.

26. ಎಂ ಗೋಪಾಲ ಕೃಷ್ಣ ಅಡಿಗರಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ?

ಉತ್ತರ: ಜೀವನದಲ್ಲಿ ಒಂದೇ ಒಂದು ಗುರಿಯನ್ನು ಇಟ್ಟುಕೊಂಡು ಅದಕ್ಕಾಗಿ ಹಗಲಿರುಳು ಹೋರಾಡಬೇಕು. ಆದರೆ ಸ್ವಾರ್ಥಿಗಳಾಗಬಾರದು, ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು ಇದುವೇ ಮನುಷ್ಯ ಜೀವನ. ಕಮಲ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದಳವನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿಸೇರಿ ಜೀವನ ಸಾರ್ಥಕಮಾಡಿಕೊಳ್ಳುತ್ತದೆ. ಹಾಗೆ ಮಾನವನು ತನ್ನ ಕೀಳರಿಮೆಯನ್ನು ತೊರೆದು ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಅಡಿಗರು ಹೇಳುತ್ತಾರೆ.

**ಅಥವಾ**

ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ?

ಉತ್ತರ: ಬದುಕಿಗೊಂದು ನಿಶ್ಚಿತ ಗುರಿ ಇರಬೇಕು. ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ಗುರಿ ಸಾಧನೆಯ ಮಾರ್ಗದಲ್ಲಿ ಹಲವಾರು ತೊಂದರೆಗಳು ಎದುರಾಗಬಹುದು, ಅವುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಮುಂದೆ ಸಾಗಬೇಕು. ಒಂದು ಬಾಣಕ್ಕೆ ಗುರಿ ಒಂದೆ, ದೇಹಕ್ಕೆ ಆತ್ಮ ಒಂದೆ ಇರುವಂತೆ ನಮ್ಮ ಜೀವನಕ್ಕೂ ಒಂದೇ ಹೆಗ್ಗುರಿ ಇರಬೇಕು. ಸ್ವಾರ್ಥವನ್ನು ತ್ಯಜಿಸಿ, ದೇಶದ ಅಭಿವೃದ್ಧಿಗೆ, ಸಮಾಜದ ಏಳಿಗೆಗೆ, ಪರರ ಹಿತಕ್ಕೆ, ನೊಂದವರ ಬದುಕಿಗೆ ಸಹಾಯ ಮಾಡುವುದು ನರನ ಜೀವನದ ಗುರಿಯಾಗಬೇಕೆಂದು ಅಡಿಗರು ಆಶಿಸಿದ್ದಾರೆ.

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

ಹನ್ನೆರಡನೆ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಾದ ಬಸವಣ್ಣನವರು ವಿಜಯಪುರ ಜಿಲ್ಲೆಯ ಬಾಗೆವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಜನಿಸುತ್ತಾರೆ. ತಂದೆಯ ಹೆಸರು ಮಾದರಸ ತಾಯಿ ಮಾದಲಾಂಬಿಕೆ. ತಮ್ಮ ಎಂಟನೇ ವಯಸ್ಸಿನಲ್ಲಿ ಮನೆಯನ್ನು ತೊರೆದು ಕೂಡಲಸಂಗಮಕ್ಕೆ ಬಂದು ಜಾತವೇದ ಮುನಿಗಳ ಹತ್ತಿರ ವಿಧ್ಯಾಭ್ಯಾಸ ಮಾಡಿ ಆಧ್ಯಾತ್ಮದಲ್ಲಿ ಮಹೋನ್ನತವಾದ ಸಾಧನೆಯನ್ನುಮಾಡಿ ಹೊಸ ತತ್ವವನ್ನು ಹುಟ್ಟು ಹಾಕುತ್ತಾರೆ. ನಂತರ ಕಲ್ಯಾಣಕ್ಕೆ ಬಂದು ಬಿಜ್ಜಳರಸನ ಪ್ರಧಾನಿಯಾಗಿ ಅನುಭವ ಮಂಟಪವನ್ನು ಸ್ಥಾಪಿಸುತ್ತಾರೆ. ಈ ಅನುಭವ ಮಂಟಪದಲ್ಲಿ ಎಲ್ಲ ವರ್ಗದವರಿಗೂ ಮುಕ್ತ ಪ್ರವೇಶವಿತ್ತು. ಕಾಯಕಕ್ಕೆ ಮಹತ್ವವಿತ್ತು. ಸಮಾನತೆಯ ಆಧಾರದ ಮೇಲೆ ಹೊಸ ಸಮಾಜ ಕಟ್ಟುವುದು ಶರಣರ ಪ್ರಮುಖ ಗುರಿಯಾಗಿತ್ತು.

27. ಹನ್ನೆರಡನೇಯ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರ ಯಾರು ?
ಉತ್ತರ: ಗುರು ಬಸವಣ್ಣನವರು ಹನ್ನೆರಡನೇಯ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದಾರೆ.

28. ಬಸವಣ್ಣನವರ ತಂದೆ-ತಾಯಿಯ ಹೆಸರೇನು ?
ಉತ್ತರ: ಬಸವಣ್ಣನವರ ತಂದೆ-ಮಾದರಸ ತಾಯಿ-ಮಾದಲಾಂಬಿಕೆ.
29. ಬಸವಣ್ಣನವರು ಯಾರ ಹತ್ತಿರ ವಿಧ್ಯಾಭ್ಯಾಸ ಮಾಡಿದರು ?

ಉತ್ತರ: ಬಸವಣ್ಣನವರು ಜಾತವೇದಮುನಿಗಳ ಹತ್ತಿರ ವಿಧ್ಯಾಭ್ಯಾಸ ಮಾಡಿದರು.

30. ಶರಣರ ಪ್ರಮುಖ ಗುರಿ ಏನಾಗಿತ್ತು ?

ಉತ್ತರ: ಸಮಾನತೆಯ ಆಧಾರದ ಮೇಲೆ ಹೊಸ ಸಮಾಜ ಕಟ್ಟುವುದು ಶರಣರ ಪ್ರಮುಖ ಗುರಿಯಾಗಿತ್ತು.

## ಭಾಗ–ಬಿ

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

31. ' ಜೀವೋಲ್ಲಾಸ' ಎಂಬ ಪದವು ಈ ಸಂಧಿಗೆ ಉದಾಹರಣೆ
ಎ) ಗುಣಸಂಧಿ ಬಿ) ಆಗಮಸಂಧಿ ಸಿ) ವೃದ್ಧಿ ಸಂಧಿ ಡಿ) ಸವರ್ಣದೀರ್ಘ
ಉತ್ತರ: ಎ) ಗುಣಸಂದಿ

32. 'ಆಶ್ಚರ್ಯ' ಪದದ ತದ್ಭವ ರೂಪ ಇದು
ಎ) ಅಚ್ಚರಿ ಬಿ) ಎಚ್ಚರಿ ಸಿ) ಆಚ್ಚರ ಡಿ) ಹಚ್ಚರಿ
ಉತ್ತರ: ಎ) ಅಚ್ಚರಿ

33. 'ಸ್ವೀಕರಿಸು' ಪದದ ವಿರುದ್ಧ ಪದ
ಎ) ನಿರಾಕರಿಸು ಬಿ) ಹರಿಸು ಸಿ) ಕನಿಕರಿಸು ಡಿ) ದೂರಿಕರಿಸು
ಉತ್ತರ: ಎ) ನಿರಾಕರಿಸು

34. 'ಅರಮನೆ' ಈ ಪದವು ಈ ಸಮಾಸಕ್ಕೆ ಉದಾಹರಣೆ
ಎ) ಕ್ರಿಯಾಸಮಾಸ ಬಿ) ಕರ್ಮಧಾರೆಯ ಸಿ) ತತ್ಪುರುಷ ಡಿ) ದ್ವಿಗು ಸಮಾಸ
ಉತ್ತರ: ಸಿ) ತತ್ಪುರುಷ

35. 'ನೋಡು ನೋಡು' –ಇದೊಂದು
ಎ) ಅನುಕರನಾವ್ಯಯ ಬಿ) ದ್ವಿರುಕ್ತಿ ಸಿ) ಜೋಡಿಪದ ಡಿ) ಗಾದೆಮಾತು

ಉತ್ತರ: ಬಿ) ದ್ವಿರುಕ್ತಿ

36. 'ಠಣ ಠಣ'– ಇದೊಂದು
ಎ) ದ್ವಿರುಕ್ತಿ ಬಿ) ಅನುಕರನಾವ್ಯಯ ಸಿ) ಜೋಡುನುಡಿ ಡಿ) ಸರ್ವನಾಮ
ಉತ್ತರ: ಬಿ) ಅನುಕರನಾವ್ಯಯ

37. 'ಮನೆಯಲ್ಲಿ' ಪದದಲ್ಲಿರುವ ವಿಭಕ್ತಿ
ಎ) ದ್ವಿತಿಯಾ ಬಿ) ತೃತಿಯಾ ಸಿ) ಚತುರ್ಥಿ ಡಿ) ಸಪ್ತಮಿ
ಉತ್ತರ: ಡಿ) ಸಪ್ತಮಿ

38 'ಸರ್ವನಾಮ' ಪದಕ್ಕೆ ಇದು ಉದಾಹರಣೆ
ಎ) ಗೋಪಾಲ ಬಿ) ಅವನು ಸಿ) ಆನೆ ಡಿ) ಗಡಿಯಾರ
ಉತ್ತರ: ಬಿ) ಅವನು

39. 'ಶಿಕ್ಷಕ' ಈ ಪದ ಯಾವ ನಾಮಪದಕ್ಕೆ ಉದಾಹರಣೆ
ಎ) ಭಾವನಾಮ ಬಿ) ಸರ್ವನಾಮ ಸಿ) ರೂಢನಾಮ ಡಿ) ಅನ್ವರ್ಥನಾಮ
ಉತ್ತರ: ಡಿ) ಅನ್ವರ್ಥನಾಮ

40. 'ಮಸಗು' ಪದದ ಅರ್ಥ

ಎ) ಬೆಸಗು ಬಿ) ಚಮತ್ಕಾರ ಸಿ) ವಿಜೃಂಭಿಸು ಡಿ) ಆಚರಿಸು

ಉತ್ತರ: ಸಿ) ವಿಜೃಂಭಿಸು

41. 'ಅರಸ' ಪದಕ್ಕೆ ಪ್ರಸ್ತಾರ ಹಾಕಿದಾಗ ಮಾತ್ರೆಗಳ ಸಂಖ್ಯೆ

ಎ) ಮೂರು ಮಾತ್ರೆ ಬಿ) ನಾಲ್ಕು ಮಾತ್ರೆ ಸಿ) ಆರು ಮಾತ್ರೆ ಡಿ) ಐದು ಮಾತ್ರೆ

ಉತ್ತರ: ಎ) ಮೂರು ಮಾತ್ರೆ

42. ಕಾಯಕವೇ ----- ಈ ಗಾದೆಯನ್ನು ಪೂರ್ಣಗೊಳಿಸಿರಿ.

ಎ) ಕೈಲಾಸ ಬಿ) ಕೆಲಸ ಸಿ) ದಾಸೋಹ ಡಿ) ಬೋಧನೆ

ಉತ್ತರ: ಎ) ಕೈಲಾಸ

## ಭಾಗ–ಸಿ

ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ

43. * ಮನಸ್ಸಿದ್ದರೆ ಮಾರ್ಗ
    * ಕಾಯಕವೇ ಕೈಲಾಸ.
    * ಆಳಾಗಿ ದಡಿಯಬಲ್ಲವ ಅರಸನಾಗಿ ಆಳಬಲ್ಲ.

### ಮನಸ್ಸಿದ್ದರೆ ಮಾರ್ಗ

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ಸರ್ವ ಕಾರ್ಯಗಳಿಗೂ ಮನಸ್ಸೇ ಕಾರಣವಾಗಿದೆ. ಮನಸ್ಸು ದೃಢವಾಗಿದ್ದರೆ ನಾವು ಕೈಗೊಂಡ ಕಾರ್ಯವನ್ನು ಸಾಧಿಸುವುದು ಸುಲಭವಾಗುತ್ತದೆ. ಮನಸ್ಸು ಚಂಚಲವಾಗಿದ್ದರೆ ಕೈಗೊಂಡ ಕಾರ್ಯವು ವಿಫಲವಾಗುತ್ತದೆ. ಆದ್ದರಿಂದ ನಾವು ಮಾಡುವ ಕೆಲಸದಲ್ಲಿ ನಮ್ಮ ಮನಸ್ಸು ಕೇಂದ್ರಿಕೃತವಾಗಿರಬೇಕು ಎಂಬುದು ಈ ಮೇಲಿನ ಗಾದೆಯ ಅರ್ಥ ಹಾಗೂ ಆಶಯವಾಗಿದೆ.

**ಅಥವಾ**

### ಕಾಯಕವೇ ಕೈಲಾಸ.

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – 'ಕಾಯಕವೇ ಕೈಲಾಸ' ಈ ಮಾತನ್ನು ಹನ್ನೆರಡನೇ ಶತಮಾನದಲ್ಲಿ ಆಯ್ದಕ್ಕಿ ಲಕ್ಕಮ್ಮ ಶರಣೆ ಹೇಳಿದ ಮಾತಾಗಿದೆ. ಈಗ ಇದೊಂದು ಗಾದೆ ಮಾತಾಗಿ ಮಾರ್ಪಟ್ಟಿದೆ. ಕೈಲಾಸ ಎನ್ನುವುದು ಬೇರೆ ಎಲ್ಲೂ ಇಲ್ಲ, ಅದು ನಾವು ಮಾಡುವ ಕಾರ್ಯದಲ್ಲಿ ಅಡಗಿದೆ. ಆದ್ದರಿಂದ ಪ್ರತಿಯೊಬ್ಬರು ಕಾಯಕ ಮಾಡಬೇಕು ಅದು ಸತ್ಯ ಶುದ್ಧವಾಗಿರಬೇಕು. ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

**ಅಥವಾ**

**ಆಳಾಗಿ ದಡಿಯಬಲ್ಲವ ಅರಸನಾಗಿ ಆಳಬಲ್ಲ.**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ನಾವು ಮಾಡುವ ಯಾವುದೆ ಕೆಲಸ ಕಾರ್ಯಗಳಿರಲಿ ಅದರಲ್ಲಿ ಶ್ರೇಷ್ಠ–ಕನಿಷ್ಠ ಎಂಬ ಭಾವನೆಯನ್ನು ಹೊಂದಬಾರದು. ಶೃದ್ಧೆ, ನಿಷ್ಠೆ, ಭಕ್ತಿ ಇರಬೇಕು. ಶ್ರಮವಹಿಸಿ ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ನಾವು ಸೋಮಾರಿಗಳಾಗಬಾರದು ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

44. ನಿಮ್ಮನ್ನು ಬೆಂಗಳೂರಿನ ಮಲ್ಲೇಶ್ವರಂ ನಿವಾಸಿ ಕಮಲಾ ಎಂದು ಭಾವಿಸಿಕೊಂಡು ಬೆಂಗಳೂರಿನ ಮಹಾನಗರ ಪಾಲಿಕೆ ಆಯುಕ್ತರಿಗೆ ರಸ್ತೆ ದುರಸ್ತಿ ಮಾಡುವಂತೆ ಕೋರಿ ಒಂದು ಮನವಿ ಪತ್ರ ಬರೆಯಿರಿ.

ಇವರಿಂದ
ಕಮಲಾ
ಮಲ್ಲೇಶ್ವರಂ ಬೆಂಗಳೂರು
ದಿನಾಂಕ 10.04.2018

ಇವರಿಗೆ
ಮಾನ್ಯ ಆಯುಕ್ತರು
ಮಹಾನಗರ ಪಾಲಿಕೆ
ಬೆಂಗಳೂರು

ವಿಷಯ – ಬಡಾವಣೆಯಲ್ಲಿ ಹಾಳಾಗಿರುವ ರಸ್ತೆ ದುರಸ್ತಿಗೊಳಿಸುವ ಕುರಿತು.

ಮಾನ್ಯರೇ

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಬಡಾವಣೆಯಲ್ಲಿಯ ರಸ್ತೆಗಳು ತುಂಬಾ ಹದಗೆಟ್ಟಿವೆ. ಮಳೆಗಾಲದಲ್ಲಿ ರಸ್ತೆಯ ಅಲ್ಲಲ್ಲಿ ನೀರು ನಿಂತು ಶಾಲೆಯ ಮಕ್ಕಳಿಗೆ ಸಂಚರಿಸಲು ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಆದಷ್ಟು ಬೇಗನೆ ಹಾಳಾಗಿರುವ ರಸ್ತೆಯನ್ನು ದುರಸ್ತಿಗೊಳಿಸಬೇಕೆಂದು ತಮ್ಮಲ್ಲಿ ವಿನಂತಿ.

ವಂದನೆಗಳು

ಸ್ಥಳ – ಮಲ್ಲೇಶ್ವರಂ ಬೆಂಗಳೂರು

ತಮ್ಮ ವಿಶ್ವಾಸಿಕರು
ಕಮಲಾ

**ಅಥವಾ**

ನಿಮ್ಮನ್ನು ಕಲಬುರಗಿಯ ಸರಕಾರಿ ಪ್ರೌಢ ಶಾಲೆಯ ರಾಜಶೇಖರ ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆ ಬಗ್ಗೆ ಮೈಸೂರಿನ ನಿಮ್ಮ ಗೆಳೆಯ ಗೋಪಾಲನಿಗೆ ಪತ್ರ ಬರೆಯಿರಿ

ಇವರಿಂದ
ರಾಜಶೇಖರ 10ನೇ ತರಗತಿ
ಸ. ಪ್ರೌ. ಶಾಲೆ ಕಲಬುರಗಿ
ದಿನಾಂಕ 15.11.2017

ಆತ್ಮೀಯ ಗೆಳೆಯ ಗೋಪಾಲನಿಗೆ, ರಾಜಶೇಖರ ತಿಳಿಸುವ ಆತ್ಮೀಯ ವಂದನೆಗಳು.

ಈಗ ಪತ್ರ ಬರೆಯಲು ಕಾರಣವೆಂದರೆ ನಾನೂ ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ನಮ್ಮ ಶಾಲೆಯಲ್ಲಿ ದಿನಾಂಕ 14.11.2017ರಂದು ಶಾಲೆಯಲ್ಲಿ ಮಕ್ಕಳ ದಿನಾಚರಣೆ ಸಮಾರಂಭ ಆಯೋಜಿಸಲಾಗಿತ್ತು. ಮುಖ್ಯಗುರುಗಳು ಪಂಡಿತ ಜವಹರಲಾಲ್ ನೆಹರು ಜೀವನ ಹಾಗೂ ಮಕ್ಕಳ ದಿನಾಚರಣೆಯ ಮಹತ್ವ ಕುರಿತು ಮಾತನಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾನೂ ಹಾಗೂ ನನ್ನ ಗೆಳೆಯರು ಭಾಗವಹಿಸಿದ್ದೆವು. ಕಾರ್ಯಕ್ರಮ ಬಹಳ ಸಂತೋಷ ತಂದು ಕೊಟ್ಟಿತು. ಮನೆಯಲ್ಲಿ ತಾಯಿ, ಅಕ್ಕ, ಅಣ್ಣ ಇವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸು.

ವಂದನೆಗಳು

ವಿಳಾಸ
ಗೋಪಾಲ, ಹತ್ತನೇ ತರಗತಿ.
ಸರ್ಕಾರಿ ಪ್ರೌಢ ಶಾಲೆ
ಮೈಸೂರ.

ನಿನ್ನ ಆತ್ಮೀಯ ಗೆಳಯ
ರಾಜಶೇಖರ

45. ಕೆಳಗಿನ ಯಾವುದಾದರೊಂದು ವಿಷಯದ ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧ ಬರೆಯಿರಿ

* ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ:
* ಸ್ವಚ್ಛ ಭಾರತ ಅಭಿಯಾನ
* ಕಂಪ್ಯೂಟರ್‌ನ ಉಪಯೋಗಗಳು

**ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ:**

ಪೀಠಿಕೆ : ಸಂಪರ್ಕ ಮಾಧ್ಯಮಗಳಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಮಾಧ್ಯಮ ದೂರದರ್ಶನವಾಗಿದೆ. ಹೆಸರೇ ಹೇಳುವಂತೆ ದೂರದಲ್ಲಿರುವುದನ್ನು ಕುಳಿತಲ್ಲಿಯೇ ದರ್ಶನ ಮಾಡಿಸುವುದು ದೂರದರ್ಶನವಾಗಿದೆ.

ವಿವರಣೆ : ದೂರದರ್ಶನ ಜನಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಮಕ್ಕಳಾದಿಯಾಗಿ ವಯೋವೃದ್ಧರವರೆಗೂ ಎಲರನ್ನು ಆಕರ್ಷಿಸುವ ಮಾಧ್ಯಮವಾಗಿದೆ. ಸಮಾಜದ ನಾನಾ ವೃತ್ತಿಗಳಲ್ಲಿ ತೊಡಗಿರುವ ಎಲ್ಲಾ ಜನರಿಗೂ ಉಪಯುಕ್ತ ಮಾಹಿತಿಯನ್ನು ಒದಗಿಸುವುದರೊಂದಿಗೆ ಮನೋರಂಜನಾ ಮಾಧ್ಯಮವಾಗಿಯೂ ಕಾರ್ಯನಿರ್ವಹಿಸುತ್ತಿದೆ. ಉದಾಹರಣೆಗೆ – ರೈತರಿಗೆ ಕೃಷಿ ಮಾಹಿತಿಯನ್ನು, ವರ್ತಕರಿಗೆ ಮಾರುಕಟ್ಟೆಯ ವಿವರವನ್ನು, ಕರಾವಳಿ ತೀರದವರಿಗೆ ಹವಾಮಾನ ಹಾಗೂ ವಾಯುಗುಣದ ಎಚ್ಚರಿಕೆಯನ್ನು ಕುಳಿತಲ್ಲೇ ಏಕಕಾಲಕ್ಕೆ ಎಲ್ಲರಿಗೂ ತಿಳಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ವಿಜ್ಞಾನ, ಗಣಿತ ವಿಷಯಗಳ ಪಾಠಮಾಲಿಕೆ ಪ್ರಸಾರವಾಗುತ್ತಿವೆ. ಕ್ರೀಡೆ, ಸಂಗೀತ, ವಿಜ್ಞಾನ, ಚಲನಚಿತ್ರ, ವಿವಿಧ ಕ್ಷೇತ್ರಗಳ ಮಾಹಿತಿ ನೀಡುವುದರೊಂದಿಗೆ ಇದೊಂದು ಜ್ಞಾನಾಭಿವೃದ್ಧಿಯನ್ನು ಉಂಟು ಮಾಡುವ ಮಾಧ್ಯಮವಾಗಿದೆ.

ಉಪಸಂಹಾರ – ಆಧುನಿಕತೆಯಲ್ಲಿ ದೂರದರ್ಶನದ ಪಾತ್ರ ಪ್ರಮುಖವಾದದ್ದು. ವಿದ್ಯಾರ್ಥಿಗಳು ಇದರ ಸಾಧಕ ಭಾದಕಗಳನ್ನು ಅರಿತು ಉಪಯೋಗಿಸಿಕೊಳ್ಳಬೇಕು.

**ಅಥವಾ**

**ಸ್ವಚ್ಛ ಭಾರತ ಅಭಿಯಾನ**

ಪೀಠಿಕೆ – ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು 02.10.2014 ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದರು.

ವಿವರಣೆ – ಪ್ರದಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ದೇಶದ ಅಭಿವೃದ್ಧಿಯ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹ ಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019 ಅಕ್ಟೋಬರ್ 2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯ ಧನ ನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ 'ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ' ಎಂಬುದಾಗಿದೆ.

ಉಪಸಂಹಾರ – ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ. ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

**ಅಥವಾ**

*** ಕಂಪ್ಯೂಟರ್‌ನ ಉಪಯೋಗಗಳು**

ಪೀಠಿಕೆ – ಕಂಪ್ಯೂಟರ್ ಈ ಪದದ ಅರ್ಥವು ಕನ್ನಡದಲ್ಲಿ ಗಣಕಯಂತ್ರ ಎಂದಾಗುತ್ತದೆ. ಆಧುನಿಕತೆಯಲ್ಲಿ ಇದರ ಪ್ರಾಮುಖ್ಯತೆ ಬಹಳಷ್ಟಿದೆ. ಇಂದು ಪ್ರತಿಯೊಂದು ಶಾಲಾ ಕಾಲೇಜು, ವಿವಿಧ ಕಛೇರಿಗಳಲ್ಲಿಯೂ ಕಂಪ್ಯೂಟರ್‌ನ ಬಳಕೆಯಿದೆ. ವಿಜ್ಞಾನ ಮುಂದುವರೆದಂತೆ ಇದರಲ್ಲಿ ಅನೇಕ ವಿಧಗಳನ್ನು ನೋಡುತ್ತಿದ್ದೇವೆ.

ವಿವರಣೆ – ಕಂಪ್ಯೂಟರ್ ಎಂಬ ಈ ಮಾಯಾ ಪೆಟ್ಟಿಗೆಯ ಬಳಕೆಯಿಂದ ಮಾನವನು ಕೈಯಾರೆ ಮಾಡುವ ಮೂರ್‍ನಾಲ್ಕು ದಿನದ ಕೆಲಸವನ್ನು ಈ ಕಂಪ್ಯೂಟ್‌ರ ಸಹಾಯದಿಂದ ಕೆಲವೇ ಗಂಟೆಗಳಲ್ಲಿ ಮಾಡಬಹುದಾಗಿದೆ. ಗಣಿತ, ವಿಜ್ಞಾನ, ಸಾಮನ್ಯ ಜ್ಞಾನ, ಸಾಹಿತ್ಯ, ಸಂಸ್ಕೃತಿ ಜಗತ್ತಿನ ಅನುಭವ ಪರಿಧಿಯು ನಮಗೆ ಅಂಗೈಯಲ್ಲಿನ ನೆಲ್ಲಿಕಾಯಿಯಂತಾಗಿದೆ. ಮಾನವನು ತನಗೆ ಅವಶ್ಯವಿರುವ ದಾಖಲೆಗಳನ್ನು ಇದರಲ್ಲಿ ಸಂಗ್ರಹಿಸಿ ಬೇಕೆಂದಾಗ ತಕ್ಷಣದಲ್ಲಿ ಪಡೆಯಬಹುದಾಗಿದೆ.

ಉಪಸಂಹಾರ – ಒಟ್ಟಾರೆಯಾಗಿ ಕಂಪ್ಯೂಟ್‌ರನ ಬಳಕೆ ಆಧುನಿಕ ಯುಗದಲ್ಲಿ ಬಹಳ ಮಹತ್ವ ಪಡೆದುಕೊಂಡಿದೆ. ವೈಜ್ಞಾನಿಕ ಜಗತ್ತಿನ ವಿಶಿಷ್ಟ ಕೊಡುಗೆಯಿಂದ ಕಂಪ್ಯೂಟ್‌ರ ವಿಶಿಷ್ಟ ಸಂಪತ್ತಾಗಿದೆ.

# ದ್ವಿತೀಯ ಭಾಷೆ ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ 3

**ಹತ್ತನೇ ತರಗತಿ** **ಅಂಕಗಳು : 80** **ಅವಧಿ : 2.30ಗಂಟೆ**

**ಸೂಚನೆಗಳು :** ಪ್ರಶ್ನೆಪತ್ರಿಕೆಯು ಎ. ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಗಳನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

## ಭಾಗ – ಎ

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ

1. ಅಸಿ–ಮಸಿ ಎಂದರೇನು?
ಉತ್ತರ: ಅಸಿ ಎಂದರೆ ಯುದ್ಧ, ಮಸಿ ಎಂದರೆ ಸಾಹಿತ್ಯ ರಚನೆ.

2. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?
ಉತ್ತರ: ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಸ್ಪರ್ಶ ಸಂಜೀವಿನಿಯ ಪಾಠ ಹೇಳುತ್ತವೆ.

3. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?
ಉತ್ತರ: ಗುರುಗಳು ಹೇಳಿದಂತೆ ಜೀವನದಲ್ಲಿ ಉತ್ತಮವಾದುದನ್ನೆ ಪಡೆಯಬೇಕೆಂಬುವ ಆಸೆಯೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣವಾಗಿದೆ.

4. ಲಂಡನ್‌ನ ಭೂ ವಿಸ್ತೀರ್ಣ ಎಷ್ಟು?
ಉತ್ತರ: ಲಂಡನ್ ನಗರದ ಒಟ್ಟು ಭೂ ವಿಸ್ತೀರ್ಣ 1572 ಕಿ.ಮೀ.

5. ಲಂಡನ್‌ನಲ್ಲಿರುವ ವ್ಯಾಕ್ಸ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂತು?
ಉತ್ತರ. ಮ್ಯೂಸಿಯಂನಲ್ಲಿರುವ ವ್ಯಾಕ್ಸ್ ಗೊಂಬೆಗಳನ್ನು ಮೇಡಂ ಟುಸ್ಸೋಡ್ ರವರು ಮೊದಲು ಮಾಡಿದ್ದರಿಂದ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಬಂತು.

6. ಮೇಲೇರಿದವರು ತ್ರಿಶಂಕುಗಳು ಆಗುವುದು ಯಾವಾಗ?
ಉತ್ತರ. ಮೇಲೇರಿದವರು ಸಹಾಯ ಮಾಡಿದವರನ್ನು ಮರೆತಾಗ ತ್ರಿಶಂಕುಗಳಾಗುತ್ತಾರೆ.

7. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?
ಉತ್ತರ: ಬುದ್ಧನು ಬದುಕಿನಲ್ಲಿ ಪ್ರೀತಿ ಬಹಳ ಮುಖ್ಯವಾದುದೆಂಬ ಸತ್ಯವನ್ನು ಅರಿತನು.

8. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?
ಉತ್ತರ: ಕೌರವನ ಸೇನೆಯು ಉತ್ತರನಿಗೆ ಒಂದೆಡೆ ಸಮುದ್ರದಂತೆ ಇನ್ನೊಂದೆಡೆ ಭೂಮಿಯೇ ಈ ಸೈನ್ಯವನ್ನು ಹೆತ್ತಂತೆ ಕಾಣಿಸಿತು.

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ

9. ಹಕ್ಕಿಗಲು ಗೂಡನ್ನು ನಿರ್ಮಿಸುವ ಉದ್ದೇಶವೇನು ?
ಉತ್ತರ: ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶಗಳು ಮುಖ್ಯವಾಗಿ ತನ್ನ ಸಂತಾನೋತ್ಪತ್ತಿ, ಮರಿಗಳ ಲಾಲನೆ ಪಾಲನೆಗಾಗಿ, ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು, ಹವಾಮಾನದ ವೈಪರಿತ್ಯವನ್ನು ಎದುರಿಸಲು ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ.

10. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ-ಯಾವ ತರಹದ ಕಪ್ಪುಗಳಿದ್ದವು?
ಉತ್ತರ. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಸುಮಾರು ಮುವತ್ತು-ಮುವತ್ತೈದು ಕಪ್ಪುಗಳಿದ್ದವು. ಅದರಲ್ಲಿ ಕೆಲವು ಅತ್ಯಂತ ಬೆಲೆಬಾಳುವ ಕಪ್ಪುಗಳಾಗಿದ್ದವು. ಚೈನಾ ಪಿಂಗಾಣಿಗಳು, ಸುಂದರ ಗಾಜಿನವು, ಪ್ಲಾಸ್ಟಿಕ ಕಪ್ಪುಗಳು, ಕೆಲವು ಸ್ಟೀಲ ಲೋಟಗಳು ಇದ್ದವು.

11. ಟವರ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?
ಉತ್ತರ: ಮೂರು-ನಾಲ್ಕು ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡಗಳ ಮೇಲೆ ಈ ಟವರ್ ಇದೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ. ರಾಜಮನೆತನಗಳಲ್ಲಿರುವ ವೈಷಮ್ಯ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ 1757 ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆ. ಆದ್ದರಿಂದ ಇದನ್ನು ನಿಗೂಢ ಸ್ಥಳ ಎಂದು ಕರೆಯುತ್ತಾರೆ.

12. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಏಳಿಸಿದಳು?
ಉತ್ತರ. ಗೋಪಾಲ ಬೆಳಗಾಯ್ತು ಮೇಲೇಳು; ನೋಡಲ್ಲಿ ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ ಹಕ್ಕಿಗಳು ಹಾಡುತ್ತ ಹಾರಾಡಿ ನಿನ್ನನ್ನು ಕರೆಯುತ್ತಿವೆ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ. ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು? ಏಳು ಗೋಪಾಲ. ನನ್ನ ಕಂದಾ. ಎಂದು ತಾಯಿ ಮಗನನ್ನು ಏಳಿಸಿದಳು.

13. ಬನದ ಗೋಪಾಲನ ವೇಷಭೂಷನಗಳು ಹೇಗಿದ್ದವು ?
ಉತ್ತರ: ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲು ಗರಿ, ಕೈಯಲೊಂದು ಕೊಳಲು ಇವು ಬನದ ಗೋಪಾಲನ ವೇಷಭೂಷನಗಳು.

14. ಮೇಲೆರಿದವರಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?
ಉತ್ತರ: ಮೇಲೇರಿದವರು ಏಣಿಯ ಸಹಾಯವನ್ನು ಮರೆತು ಮೇಲಂತಸ್ತಿನಲ್ಲಿ ಹಾರಾಡಿ ನಂತರ ಅವರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಏಣಿಯ ಮಹತ್ವ ಅರಿವಾಗುತ್ತದೆ.

15. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?
ಉತ್ತರ: ಸಿದ್ಧಾರ್ಥ ಬುದ್ದನಾದ ಸಂದರ್ಭದಲ್ಲಿ ಕಾಡಿನಲ್ಲಿರುವ ಮರಗಳು ಹೂವು ಬಳ್ಳಿಗಳಿಂದ ನಗುತ್ತಿದ್ದವು. ಮರದಲ್ಲಿ ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿಹೋಯಿತು. ಇರುವೆಗಳು ಹುತ್ತಿನಿಂದ ಸಾಲು ಸಾಲಾಗಿ ನಡೆಯುತ್ತಿದ್ದವು. ಬೆಳ್ಳಕ್ಕಿಗಳು ಗುಂಪುಗಟ್ಟಿ ಬಾನಿಗೆ ಏಣಿಯನ್ನು ಹಾಕಿದ್ದವು. ಕಾಡಿನ ತುಂಬ ಪ್ರೀತಿಯ ಹೊಳೆಯು ಕೋಡಿಯಂತೆ ತುಂಬಿ ಹರಿಯುತ್ತಿತ್ತು.

16. ಕರ್ಪೂರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?
ಉತ್ತರ. ಕರ್ಪೂರದ ಕೆಲಸ ಕತ್ತಲೆಯನ್ನು ದೂರ ಮಾಡುವುದಾಗಿದೆ. ಶಾಂತ ರೀತಿಯಲ್ಲಿ ತಟ್ಟೆಯಲ್ಲಿ ಕರಗತ್ತಾ ತನ್ನ ಕೆಲಸವನ್ನು ಪೂರೈಸುತ್ತದೆ.

17. ಕುಣಿಗಲ್ ಕೆರೆಯ ನೀರುಂಡು ಬೆಳೆದ ಬಾಳೆಯನ್ನು ಜನಪದರು ಏನೆಂದು ವರ್ಣಿಸಿದ್ದಾರೆ?
ಉತ್ತರ. ಕೆರೆಯ ನೀರುಂಡು ದಷ್ಟಪುಷ್ಟವಾಗಿ ಬೆಳೆದ ಬಾಳೆಯ ಮರಗಳು ಗಾಳಿ ಮತ್ತು ನೀರಿನ ರಭಸಕ್ಕೆ ಹೊಯ್ದಾಡುವ ದೃಶ್ಯ ಮೋಹಕವಾಗಿರುತ್ತದೆ. ಇದನ್ನು ಜನಪದರು ಗಪ್ಪಾಗೊಂಬಾಳೆ ನಡುಗ್ಯಾವೆ ಎಂದು ವರ್ಣಿಸಿದ್ದಾರೆ.

18. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ?

ಉತ್ತರ: ಕಳ್ಳರು ತಮ್ಮ ಹಟ್ಟಿಗೆ ಬಂದು ಭೀಮನಾಯಕನ ಮಗನನ್ನು ಉಪಚರಿಸಬೇಕೆಂದು ವೈದ್ಯರನ್ನು ಕೇಳಿದರು. ಇವರು ಕಳ್ಳರು ಎಂಬುದು ಗೊತ್ತಿದ್ದರೂ ಜೀವಭಯವನ್ನು ಲೆಕ್ಕಿಸದೇ ಅವರೊಂದಿಗೆ ಹೋಗಿ ಭೀಮನಾಯಕನ ಮಗನ ಪ್ರಾಣ ಉಳಿಸಿದರು. ಇದರಿಂದ ಕಳ್ಳರ ಮನಃಪರಿವರ್ತನೆಯಾಗಿ ಕೃತಜ್ಞತೆಯಿಂದ ವೈದ್ಯರ ಮನೆಯಿಂದ ಕಳ್ಳತನ ಮಾಡಿದ ವಸ್ತುಗಳನ್ನು ಮರಳಿ ವೈದ್ಯರಿಗೆ ಒಪ್ಪಿಸಿದರು.

19. ನಾಗರಿಕತೆಯ ಬೆಳವಣಿಗೆಯ ಬಗ್ಗೆ ಕವಯಿತ್ರಿಗೆ ಯಾವ ಅಳಕು ಇದೆ?

ಉತ್ತರ: ನಗರಗಳು ಹಸಿರು ಪರಿಸರವನ್ನು ತಿಂದು ತೇಗಿವೆ. ಬಗೆಬಗೆಯ ಮೋಟಾರುಗಳು, ಕಾರುಗಳು, ವಿಮಾನ (ಲೋಹದ ಹಕ್ಕಿ) ಗಳು ಅಲ್ಲಿರುವ ಜೀವ ತೈಲವನ್ನು ಖಾಲಿ ಮಾಡುತ್ತಿವೆ. ಹಸಿರು ಕಾಡು ಕಡಿಮೆಯಾಗಿ ಕಾಂಕ್ರಿಟ್‌ಕಾಡು ಬೆಳೆಯುತ್ತಿದೆ. ನಾಳಿನ ಬದುಕು ಹೇಗೋ ಏನೋ ಎಂಬ ಅಳಲನ್ನು ಕವಯಿತ್ರಿ ಈ ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

**ಈ ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ**

20. ಕೊರಡ ಕೊನರಿಸಿ **ತುದಿಗೆ ಮುಗುಳ ನಗೆ ಮುತ್ತಿಟ್ಟು**
**ಬರಡು ಜೀವಕೆ ಹೊಸತು ಚೈತನ್ಯವು**
**ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ**
**ಚಿಲಿಪಿಲಿಯ ಕಲರವಕೆ** ಮತ್ತೇರಿದೆ

ಅಥವಾ

ಯುಗದ ಹಿಂದಿನ **ಕೊಳೆಯ ತಿಕ್ಕಿ ಮೈ ತೊಳೆದಂತೆ**
**ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ**
**ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ**
**ಎಲ್ಲರೆದೆಗಳ ತುಂಬ** ಸವಿಚೈತ್ರವು

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ**

21. " ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು"

ಹೇಳಿಕೆ : ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ರವರು ಬರೆದ ಅಸಿ-ಮಸಿ-ಕೃಷಿ ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. ಆಕರಗ್ರಂಥ – ವ್ಯಕ್ತಿತ್ವ ಎಂಬ ಪ್ರಬಂಧ ಸಂಕಲನ.

ಸಂದರ್ಭ : ಕೃಷಿ ಮತ್ತು ರೈತನ ಮಹತ್ವವನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.

ವಿವರಣೆ : ಲೇಖಕರು ದೇಶದ ಪ್ರಗತಿಯಲ್ಲಿ ಅಸಿ–ಮಸಿಗಿಂತ ಕೃಷಿಯ ಪಾತ್ರ ಹಿರಿದಾದುದು ಎಂದು ಹೇಳಿದ್ದಾರೆ. 'ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು.' ಎಂಬ ಮಾತಿನಂತೆ ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಎಲ್ಲರೂ ಭಿಕ್ಷುಕರಂತಾಗುತ್ತೇವೆ ಜಗತ್ತು ತೊಂದರೆಗೆ ಒಳಗಾಗುತ್ತದೆ. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರೆದರು ಆಹಾರವಿಲ್ಲದೆ ಬದುಕಲು ಅಸಾಧ್ಯ. ಆದ್ದರಿಂದ ಕೃಷಿಕನೇ ಈ ನಾಡಿನ ಬೆನ್ನೆಲಬು.

22. 'ವೇದಾಂತವನೋದಿ ಫಲವೇನಯ್ಯಾ"

ಹೇಳಿಕೆ: ಈ ಸಾಲನ್ನು ಸಿದ್ಧರಾಮೇಶ್ವರರ ವಚನದಿಂದ ಆರಿಸಲಾಗಿದೆ. ಆಕರ ಗ್ರಂಥ – ಕರ್ನಾಟಕ ಸರ್ಕಾರದ ಸಮಗ್ರ ವಚನ ಸಂಪುಟ.

ಸಂದರ್ಭ: ಸಿದ್ಧರಾಮೇಶ್ವರರು ವ್ಯಕ್ತಿಯ ನಡೆ–ನುಡಿ ಒಂದಾಗಿರಬೇಕು ಎಂದು ಹೇಳುವಾಗ ಈ ಮಾತನ್ನು ಹೇಳಿದ್ದಾರೆ.

ವಿವರಣೆ: ವೇದಗಳನ್ನು ಓದಿ, ಅದರ ಜ್ಞಾನವನ್ನು ಅರಿತುಕೊಳ್ಳದಿದ್ದರೆ ಅದರಿಂದ ಬಂದ ಫಲವೇನು? ವೇದಗಳನ್ನೋದಿದ ಮೇಲೆ ಅದರ ಜ್ಞಾನವನ್ನು ಅರ್ಥೈಸಿಕೊಂಡು ಜೀವನದಲ್ಲಿ ರೂಢಿಸಿಕೊಳ್ಳಬೇಕೆಂದು ವಚನಕಾರರು ನಿದರ್ಶನಗಳ ಮೂಲಕ ಪ್ರತಿಪಾದಿಸಿದ್ದಾರೆ.

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ**

23. ಅ.ರಾ. ಮಿತ್ರ

ಅ.ರಾ. ಮಿತ್ರಾ ಇವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ ಇವರು ಹೊಸಗನ್ನಡದ ಪ್ರಸಿದ್ಧ ಲೇಖಕರಾಗಿದ್ದಾರೆ. 1935ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳುವಿನಲ್ಲಿ ಜನಿಸಿದ ಇವರು ಉಪನ್ಯಾಸಕರಾಗಿ, ರೀಡರ್, ಪ್ರೋಫೆಸರ್, ಪ್ರಿನ್ಸಿಪಾಲ್‌ರಾಗಿ ಸೇವೆ ಸಲ್ಲಿಸುತ್ತಾ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡು ಆರತಕ್ಷತೆ ಮತ್ತು ಇತರ ಪ್ರಬಂಧಗಳು, ನಾನೇಕೆ ಕೊರೆಯುತ್ತೇನೆ, ಛಂದೋಮಿತ್ರ, ಕನ್ನಡ ಮೇಘದೂತ, ಮಹಾಭಾರತ ಪಾತ್ರ ಸಂಗತಿಗಳು, ವಚನಕಾರರು ಮತ್ತು ಶಬ್ಧಕಲ್ಪ, ಒಳನೋಟಗಳು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ನಿವೃತ್ತ ಜೀವನವನ್ನು ಬೆಂಗಳೂರಿನಲ್ಲಿ ಕಳೆಯುತ್ತಿದ್ದಾರೆ.

24. ಕುಮಾರವ್ಯಾಸ

ಗದಗ ಜಿಲ್ಲೆಯ ಕೋಳಿವಾಡದಲ್ಲಿ ಜನಿಸಿದ ಇವರ ಕಾಲ 1430 ಎಂದು ತಿಳಿದು ಬರುತ್ತದೆ. ಗದುಗಿನ ವೀರನಾರಾಯಣನನ್ನು ಆರಾಧ್ಯ ದೈವವನ್ನಾಗಿಸಿಕೊಂಡ ಇವನು ಕರ್ನಾಟ ಭಾರತ ಕಥಾಮಂಜರಿ(ಗದುಗಿನ ಭಾರತ), ಐರಾವತ ಕೃತಿಗಳನ್ನು ರಚಿಸಿದ್ದಾನೆ. ಕಾವ್ಯದಲ್ಲಿ ರೂಪಕ ಅಲಂಕಾರವನ್ನು ಅಧೀಕವಾಗಿ ಬಳಸಿದ್ದರಿಂದ ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂಬ ಅಭಿದಾನಕ್ಕೆ ಪಾತ್ರನಾಗಿದ್ದಾನೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

25. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ಕುರಿತು ವಿವರಿಸಿ.

ಉತ್ತರ: ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವುದರಲ್ಲಿ ತುಂಬಾ ಆಸಕ್ತಿ ಇತ್ತು. ಒಮ್ಮೆ ಮನೆಯಲ್ಲಿ ಯಾರು ಇಲ್ಲದಾಗ ಹಾರ್ಮೋನಿಯಂ ನುಡಿಸಲು ಆಂಭಿಸಿದ. ಹಾರ್ಮೋನಿಯಂನಿಂದ ಹೊರಟ ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗು ಹೊರಗೂ ನೆರೆದರು. ಹೊಲಕ್ಕೆ ಹೋಗಿದ್ದ ಅವರ ಮಾವ ಮನೆಗೆ ಬಂದಾಗ ನೆರೆದಿದ್ದ ಜನರನ್ನು ನೋಡಿ ಆಶ್ಚರ್ಯಚಕಿತರಾದರು. ಮಾವನ ಕಾಲು ಸಪ್ಪಳ ಕೇಳಿ ಎಚ್ಚೆತ್ತ ಬಾಲಕ ಇನ್ನೊಮ್ಮೆ ಹಾರ್ಮೋನಿಯಂ ಮುಟ್ಟುವುದಿಲ್ಲ ಎಂದು ಅಳಲಾರಂಬಿಸಿದ. ಅಳುತ್ತಿದ್ದ ಬಾಲಕನನ್ನು ಎದೆಗಪ್ಪಿಕೊಂಡ ಅವರ ಮಾವ ಈ ಹಾರ್ಮೋನಿಯಂ ಇನ್ನು ಮುಂದೆ ನನ್ನದಲ್ಲ ಇದು ನಿನ್ನ ಆಸ್ತಿ ಎಂದು ಸಂತೈಸಿ ಆನಂದಬಾಷ್ಪ ಸುರಿಸಿದರು.

**ಅಥವಾ**

- ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ.

ಉತ್ತರ: ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆಆಲೂರಿನಲ್ಲಿ ಕ್ಯಾಂಪ ಹಾಕಿತ್ತು. ಆ ಸಂದರ್ಭದಲ್ಲಿ ತಾಯಿ ಸಿದ್ಧಮ್ಮನವರು ಮಗನನ್ನು ಕಾಣಲು ಬಂದರು. ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮಗನನ್ನು ನೋಡಿ ಸಂತಸಪಟ್ಟರು. ಗುರುಗಳ ಆಜ್ಞೆ ಪಡೆದು ಮಗನನ್ನು ಮನೆಗೆ ಬರುವಂತೆ ಕೇಳಿಕೊಂಡರು. ಪುಟ್ಟರಾಜರು ತಮ್ಮ ಮೃದುವಾದ ಮಾತುಗಳಿಂದ ತಮ್ಮ ಇಚ್ಛೆಯನ್ನು ಹೇಳಿದರು. ನನಗೆ ನನ್ನ ಗುರುಗಳೇ ಸರ್ವಸ್ವ ಅವರು ನನಗೆ ಸಮಾಜದ ಹಣದಿಂದ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ನಿನ್ನ ಜೊತೆ ಹೇಗೆ ಬರಲು ಸಾಧ್ಯ? ನಾನು ಎಲ್ಲ ಬಂಧನಗಳನ್ನು ತೊಡೆದು ಹಾಕಿರುವೆ ನನ್ನನ್ನು ಸಮಾಜಕ್ಕೆ ಅರ್ಪಿಸು ತಾಯಿ ಎಂದು ಕೇಳಿಕೊಂಡರು.

26. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ?

ಉತ್ತರ: ಜೀವನದಲ್ಲಿ ಒಂದೇ ಒಂದು ಗುರಿಯನ್ನು ಇಟ್ಟುಕೊಂಡು ಅದಕ್ಕಾಗಿ ಹಗಲಿರುಳು ಹೋರಾಡಬೇಕು. ಆದರೆ ಸ್ವಾರ್ಥಿಗಳಾಗಬಾರದು, ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು ಇದುವೇ ಮನುಷ್ಯ ಜೀವನ. ಕಮಲ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದಳವನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿಸೇರಿ ಜೀವನ ಸಾರ್ಥಕಮಾಡಿಕೊಳ್ಳುತ್ತದೆ. ಹಾಗೆ ಮಾನವನು ತನ್ನ ಕೀಳರಿಮೆಯನ್ನು ತೊರೆದು ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಅಡಿಗರು ಹೇಳುತ್ತಾರೆ.

**ಅಥವಾ**

* ಗುರಿ ಪದ್ಯದ ಸಾರಾಂಶ ಬರೆಯಿರಿ.

ಉತ್ತರ: ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು ಆಗ ಜೀವನ ಸಾರ್ಥಕತೆ ಹೊಂದುತ್ತದೆ. ಕಮಲ ಕೆಸರೊಳಗೆ ಹುಟ್ಟಿದರೂ ದೇವರ ಮುಡಿ ಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿ ಕಿರಣಗಳಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಠವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ತಲುಪುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.

**ಈ ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

ಗಂಗರಾಜನ ನೇತೃತ್ವದಲ್ಲಿ ಸುತ್ತಮುತ್ತಲಿನ ಸಣ್ಣ ಸಣ್ಣ ರಾಜ್ಯಗಳನ್ನು ಹೊಯ್ಸಳ ಸೈನ್ಯ ಜಯಿಸಿತು. ಹೀಗೆ ಪ್ರಭಲರಾಗುತ್ತಲೇ ಹೋದ ಹೊಯ್ಸಳ ರಾಜ್ಯದ ಸೈನ್ಯ ತಲಕಾಡಿನಲ್ಲಿದ್ದ ಚೋಳರನ್ನು ಎದುರಿಸಿ, ಓಡಿಸಿದ್ದು ಮಹಾನ್ ವಿಜಯವೇ ಆಗಿದೆ. ಏಕೆಂದರೆ ಚೋಳಸಾಮ್ರಾಜ್ಯ ದಕ್ಷಿಣದಲ್ಲಿ ಅತ್ಯಂತ ಬಲಿಷ್ಠವಾಗಿತ್ತು. ಅಷ್ಟೇ ಬಲಿಷ್ಠವಾದ ಮತ್ತೊಂದು ಸಾಮ್ರಾಜ್ಯವೆಂದರೆ ಚಾಲುಕ್ಯ ಸಾಮ್ರಾಜ್ಯ. ಹೊಯ್ಸಳ ಸೈನ್ಯ ಗಂಗರಾಜನ ನೇತೃತ್ವದಲ್ಲಿ ಹಾಸನ ಜಿಲ್ಲೆಯ ಕಣ್ಣೇಗಾಲ ಎಂಬಲ್ಲಿ ಚಾಲುಕ್ಯರನ್ನು ಎದುರಿಸಿ ದಿಗ್ವಿಜಯವನ್ನು ಸಾಧಿಸಿತು. ದಕ್ಷಿಣ ಭಾರತದ ಎರಡು ಬಲಿಷ್ಠ ಸಾಮ್ರಾಜ್ಯಗಳನ್ನು ಬಗ್ಗುಬಡಿದು, ಮೂರನೆಯ ಮಹಾನ್ ಸಾಮ್ರಾಜ್ಯವಾಗಿ ಹೊಯ್ಸಳ ರಾಜ್ಯ ಬೆಳೆಯುವಲ್ಲಿ ಗಂಗರಾಜ ಪ್ರಮುಖ ಪಾತ್ರ ವಹಿಸಿದ್ದನು. ಪುಟ್ಟ ಸಾಮಂತ ರಾಜ್ಯವೊಂದು ಇದ್ದಕ್ಕಿದ್ದಂತೆ ದೊಡ್ಡ ಸಾಮ್ರಾಜ್ಯವಾಗಬೇಕೆಂದರೆ, ಅವರ ಸೈನ್ಯ ಎಷ್ಟು ಸಮರ್ಥವಾಗಿರಬೇಡ! ಗಂಗರಾಜನ ಉಸ್ತುವಾರಿಯಲ್ಲಿ ಹೊಯ್ಸಳ ಸೈನ್ಯ, ಶೌರ್ಯ ಸಾಹಸಗಳನ್ನು ಮೆರೆಯಿತು.

27. ತಲಕಾಡಿನಲ್ಲಿ ಯಾರ ಯಾರ ನಡುವೆ ಯುದ್ಧ ನಡೆಯಿತು ?
ಉತ್ತರ: ತಲಕಾಡಿನಲ್ಲಿ ಹೊಯ್ಸಳ ಮತ್ತು ಚೋಳರ ನಡುವೆ ಯುದ್ಧ ನಡೆಯಿತು.

28. ದಕ್ಷಿಣ ಭಾರತದ ಎರಡು ಬಲಿಷ್ಠ ರಾಜ್ಯಗಳು ಯಾವುವು ?
ಉತ್ತರ: ಚೋಳ ಮತ್ತು ಚಾಲುಕ್ಯ ಸಾಮ್ರಾಜ್ಯಗಳು ದಕ್ಷಿಣ ಭಾರತದ ಎರಡು ಬಲಿಷ್ಠ ರಾಜ್ಯಗಳಾಗಿದ್ದವು.

29. ಕಣ್ಣೆಗಾಲ ಯಾವ ಜಿಲ್ಲೆಯಲ್ಲಿದೆ ?
ಉತ್ತರ: ಕಣ್ಣೆಗಾಲ ಹಾಸನ ಜಿಲ್ಲೆಯಲ್ಲಿದೆ.

30. ಗಂಗರಾಜ ಯಾವ ಸಾಮ್ರಾಜ್ಯದಲ್ಲಿ ಮಂತ್ರಿಯಾಗಿದ್ದನು ?
ಉತ್ತರ: ಗಂಗರಾಜ ಹೊಯ್ಸಳ ಸಾಮ್ರಾಜ್ಯದಲ್ಲಿ ಮಂತ್ರಿಯಾಗಿದ್ದನು.

## ಭಾಗ– ಬಿ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಪರ್ಯಾಯ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

31. 'ಕೃತಘ್ನ' ಪದದ ವಿರುದ್ಧಾರ್ಥಕ ಪದ—

ಎ) ಕೃತಕರ್ತೃ ಬಿ) ಕೃತಾರ್ಥ ಸಿ) ಕೃತಜ್ಞ ಡಿ) ಕೃಪಣ

ಉತ್ತರ: ಸಿ) ಕೃತಜ್ಞ

32. 'ಸರ್ವಾಧೀಕಾರಿ' ಈ ಪದವು – – ಸಂದಿಗೆ ಉದಾಹರಣೆಯಾಗಿದೆ

ಎ) ಗುಣಸಂಧಿ ಬಿ) ಸವರ್ಣದೀರ್ಘಸಂಧಿ ಸಿ) ಲೋಪಸಂಧಿ ಡಿ) ಆದೇಶ ಸಂಧಿ

ಉತ್ತರ: ಬಿ) ಸವರ್ಣದೀರ್ಘಸಂಧಿ

33. 'ಬುನಾದಿ' ಪದದ ಅರ್ಥ – – –

ಎ) ಬುಡಕಟ್ಟು ಬಿ) ಅಡಿಪಾಯ ಸಿ) ಆದಿ ಡಿ) ಮೊದಲು

ಉತ್ತರ: ಬಿ) ಅಡಿಪಾಯ

34. 'ಆಶ್ಚರ್ಯ' ಪದದ ತದ್ಭವ ರೂಪ

ಎ) ಆಶ್ರಯ ಬಿ) ಆಶ್ರಮ ಸಿ) ಅಚ್ಚರಿ ಡಿ) ಆರ್ಯ

ಉತ್ತರ: ಸಿ) ಅಚ್ಚರಿ

35. 'ಜೀವನದಲ್ಲಿ' – ಈ ಪದವು ಹೊಂದಿರುವ ವಿಭಕ್ತಿ ಪ್ರತ್ಯಯ......

ಎ) ಪ್ರಥಮ ಬಿ) ಷಷ್ಠಿ ಸಿ) ಸಪ್ತಮಿ ಡಿ) ದ್ವಿತೀಯಾ

ಉತ್ತರ: ಸಿ) ಸಪ್ತಮಿ

36. ಕರ್ಪೂರ ಮೌನದಲಿ ಕರಗುವೊಲು. – ಇಲ್ಲಿರುವ ಅಲಂಕಾರ

ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷ ಡಿ) ದೃಷ್ಟಾಂತ

ಉತ್ತರ: ಎ) ಉಪಮಾ

37. ಅಂಕಿತನಾಮಕ್ಕೆ ಉದಾಹರಣೆ....

ಎ) ಇಂದ್ರ ಬಿ) ಕಲ್ಲು ಸಿ) ಬೆಟ್ಟ ಡಿ) ಕುರುಡ

ಉತ್ತರ: ಎ) ಇಂದ್ರ

38. ಜೋಡುನುಡಿಗೆ ಉದಾಹರಣೆ ......

ಎ) ಬಿಸಿಬಿಸಿ ಬಿ) ಕಲಕಲ ಸಿ) ಕ್ರಿಮಿಕೀಟ ಡಿ) ಪಿಳಿಪಿಳಿ

ಉತ್ತರ: ಸಿ) ಕ್ರಿಮಿಕೀಟ

39. ಬನ್ನಿಬನ್ನಿ – ಎಂಬುದು ಇದಕ್ಕೆ ಉದಾಹರಣೆಯಾಗಿದೆ

ಎ) ದ್ವಿರುಕ್ತಿ ಬಿ) ಅನುಕರಣಾವ್ಯಯ ಸಿ) ಸರ್ವನಾಮ ಡಿ) ಜೋಡುನುಡಿ

ಉತ್ತರ: ಎ) ದ್ವಿರುಕ್ತಿ

40. ಕ್ರಿಯಾಪದದ ಮೂಲ ರೂಪ......

ಎ) ಪ್ರತ್ಯಯ ಬಿ) ಧಾತು ಸಿ) ಉಪಸರ್ಗ ಡಿ) ನಾಮಪ್ರಕೃತಿ

ಉತ್ತರ: ಬಿ) ಧಾತು

41. 'ಮೂಡಣ' ಪದವು ಈ ಗುಂಪಿಗೆ ಸೇರುತ್ತದೆ

ಎ) ಸಂಖ್ಯಾವಾಚಕ ಬಿ) ಗುಣವಾಚಕ ಸಿ) ಸರ್ವನಾಮ ಡಿ) ದಿಗ್ವಾಚಕ

ಉತ್ತರ: ಡಿ) ದಿಗ್ವಾಚಕ

42. ಅಮ್ಮಾ ಅವನಿಗೆ ನನ್ನ ಗುರುತಿಯೆ ..... – ಈ ವಾಕ್ಯದ ಅಂತ್ಯದಲ್ಲಿ ಬಳಸಬಹುದಾದ ಲೇಖನ ಚಿನ್ಹೆ

ಎ) ಉದ್ಗಾರವಾಚಕ ಬಿ) ಪ್ರಶ್ನಾರ್ಥಕ ಸಿ) ಪೂರ್ಣವಿರಾಮ ಡಿ) ಅಲ್ಪವಿರಾಮ

ಉತ್ತರ: ಬಿ) ಪ್ರಶ್ನಾರ್ಥಕ

## ಭಾಗ – ಸಿ

43. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೊಂದನ್ನು ವಿಸ್ತರಿಸಿ ಬರೆಯಿರಿ.

* ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ.
* ತಾಳಿದವನು ಬಾಳಿಯಾನು.
* ಕೈ ಕೆಸರಾದರೆ ಬಾಯಿ ಮೊಸರು.

*** ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ.**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ದೇಶದ ಪ್ರಗತಿಯಲ್ಲಿ ಕೃಷಿಯ ಪಾತ್ರ ಹಿರಿದಾದುದು. 'ಒಕ್ಕಲಿಗ ಒಕ್ಕದಿದ್ದರೆ ಜಗವೆಲ್ಲ ಬಿಕ್ಕುವುದು.' ಎಂಬ ಗಾದೆ ಮಾತಿನಂತೆ ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಎಲ್ಲರೂ ಭಿಕ್ಷುಕರಂತಾಗುತ್ತೇವೆ ಜಗತ್ತು ತೊಂದರೆಗೆ ಒಳಗಾಗುತ್ತದೆ. ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದುವರೆದರು ಆಹಾರವಿಲ್ಲದೆ ಬದುಕಲು ಅಸಾಧ್ಯ. ಆದ್ದರಿಂದ ಕೃಷಿಕನೇ ಈ ನಾಡಿನ ಬೆನ್ನೆಲಬು. ಒಟ್ಟಾರೆಯಾಗಿ ಕೃಷಿಯ ಮಹತ್ವ ತಿಳಿಸುವ ಗಾದೆಮಾತು ಇದಾಗಿದೆ.

**ಅಥವಾ**

*** ತಾಳಿದವನು ಬಾಳಿಯಾನು.**

**ಪೀಠಿಕೆ** – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ** – ಮಾನವ ಜೀವನದಲ್ಲಿ ತಾಳ್ಮೆ ಬಹಳ ಮುಖ್ಯವಾದದ್ದು. ನೆಮ್ಮದಿಯ ಜೀವನ ನಮ್ಮದಾಗಬೇಕಾದರೆ ಬದುಕಿನಲ್ಲಿ ತಾಳ್ಮೆ ಎಂಬುದು ನೆಲೆಗೊಂಡಿರಬೇಕು. ವಾದಿರಾಜರು 'ತಾಳುವಿಕೆಗಿಂತ ತಪವು ಇಲ್ಲ' ಎಂದು ಹೇಳುತ್ತಾರೆ. ಆದ್ದರಿಂದ ನಾವು ಯಾವುದೇ ಕೆಲಸ–ಕಾರ್ಯ ಮಾಡುವಾಗ ತಾಳ್ಮೆಯಿಂದ ಯೋಚಿಸಿ ಕಾರ್ಯ ಪ್ರವೃತ್ತರಾಗಬೇಕು ಎಂಬುದು ಈ ಗಾದೆ ಮಾತಿನ ಉದ್ದೇಶವಾಗಿದೆ.

**ಅಥವಾ**

**ಕೈ ಕೆಸರಾದರೆ ಬಾಯಿ ಮೊಸರು.**

**ಪೀಠಿಕೆ** – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ** – ಕೈ ಕೆಸರಾದರೆ ಬಾಯಿ ಮೊಸರು ಎಂದರೆ ಕಷ್ಟಪಟ್ಟು ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಉದಾಹರಣೆಗೆ – ರೈತರು ಸರಿಯಾದ ಸಮಯದಲ್ಲಿ ಹೊಲದಲ್ಲಿ ಉತ್ತಿ ಬಿತ್ತಿ ಬೆಳೆ ಬೆಳೆದರೆ ಮುಂದೆ ಫಸಲು ಸಮೃದ್ಧವಾಗಿ ಸಿಗುತ್ತದೆ. 'ಆಳಾಗಿ ದುಡಿ ಅರಸನಾಗಿ ಉಣ್ಣು, ಎಂಬ ಗಾದೆ ಮಾತಿಗೆ ಸಮಾನವಾದ ಗಾದೆಯಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

44. ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಸರಕಾರಿ ಪ್ರೌಢ ಶಾಲೆಯ ಅನಿಕೇತ ಎಂದು ಭಾವಿಸಿಕೊಂಡು ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹಣ ಕಳುಹಿಸುವಂತೆ ತಂದೆಗೆ ಪತ್ರ ಬರೆಯಿರಿ.

ಇವರಿಂದ
ಅನಿಕೇತ 10ನೇ ತರಗತಿ
ಸ. ಪ್ರೌ. ಶಾಲೆ ಕುವೆಂಪು ನಗರ
ಮೈಸೂರ
ದಿನಾಂಕ 10.02.2017

ತೀರ್ಥರೂಪ ತಂದೆಯವರಿಗೆ ನಿಮ್ಮ ಮಗನಾದ ಅನಿಕೇತ ತಿಳಿಸುವ ನಮಸ್ಕಾರಗಳು.

ಈಗ ಪತ್ರ ಬರೆಯಲು ಕಾರಣವೆಂದರೆ ನಾನೂ ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ನಮ್ಮ ಶಾಲೆಯಲ್ಲಿ ಕರ್ನಾಟಕ ದರ್ಶನ ಎಂಬ ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಿದ್ದಾರೆ. ಪ್ರವಾಸದಲ್ಲಿ ಭಾಗವಹಿಸಲು ಒಂದು ಸಾವಿರ ರೂಪಾಯಿ ಹಣವನ್ನು ಅಂಚೆಯ ಮೂಲಕ ಕಳುಹಿಸಿ ಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮನೆಯಲ್ಲಿ ತಾಯಿ, ಅಕ್ಕ, ಅಣ್ಣ ಇವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿರಿ.

ನಮಸ್ಕಾರಗಳು

ಇಂತಿ ನಿಮ್ಮ ಮಗ
ಅನಿಕೇತ

ವಿಳಾಸ
ರಮೇಶ ಎನ್.
ಬಸವನಗರ , ಬಾಗಲಕೋಟೆ

**ಅಥವಾ**

ನಿಮ್ಮನ್ನು ಕಲಬುರಗಿಯ ಸರಕಾರಿ ಪ್ರೌಢ ಶಾಲೆಯ ತನ್ಮಯಿ ಎಂದು ಭಾವಿಸಿಕೊಂಡು ಆರೋಗ್ಯ ತಪಾಸಣೆಗಾಗಿ ಎರಡು ದಿನಗಳ ರಜೆ ಕೊಡುವುಂತೆ ವಿನಂತಿಸಿ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ.

ಇವರಿಂದ
ತನ್ಮಯಿ 10ನೇ ತರಗತಿ
ಸ. ಪ್ರೌ. ಶಾಲೆ ಕಲಬುರಗಿ
ದಿನಾಂಕ 10.02.2018

ಇವರಿಗೆ,
ಮಾನ್ಯ ಮುಖ್ಯಗುರುಗಳು
ಸರಕಾರಿ ಪ್ರೌಢ ಶಾಲೆ
ಕಲಬುರಗಿ

ವಿಷಯ : ಆರೋಗ್ಯ ತಪಾಸಣೆಗಾಗಿ ಎರಡು ದಿನಗಳ ರಜೆ ನೀಡುವಂತೆ ಮನವಿ ಪತ್ರ.

ಮಾನ್ಯರೇ,

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಹತ್ತನೇ ತರಗತಿ ವಿದ್ಯಾರ್ಥಿನಿ ತನ್ಮಯಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ದಿನಾಂಕ 11.02.2018 ಹಾಗೂ 12.02.2018ರಂದು ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಹೋಗುತ್ತಿರುವುದರಿಂದ ಎರಡು ದಿನಗಳ ರಜೆ ನೀಡಬೇಕೆಂದು ತಮ್ಮಲ್ಲಿ ವಿನಂತಿ.

ವಂದನೆಗಳು

ಸ್ಥಳ – ಕಲಬುರಗಿ

ತಮ್ಮ ವಿದ್ಯಾರ್ಥಿ
ತನ್ಮಯಿ

45. ಈ ಕೆಳಗಿನ ಯಾವುದಾದರೊಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.

* ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ
* ಸ್ವಚ್ಛತಾ ಆಂದೋಲನದಲ್ಲಿ ವಿದ್ಯಾರ್ಥಿಗಳ ಪಾತ್ರ.
* ನನ್ನ ನೆಚ್ಚಿನ ಕವಿ – ಕುವೆಂಪು

*** ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ.**

ಪೀಠಿಕೆ – ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ವಿವರಣೆ – ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು ನಾವೂ ಭಾರತೀಯರು ಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು ಅಗಸ್ಟ 15ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದು ಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ ಗಣರಾಜ್ಯೋತ್ಸವ ದೇಶ ಏಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

ಉಪಸಂಹಾರ – ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಪ್ರಮುಖ ಪಾತ್ರವಹಿಸುತ್ತವೆ.

**ಅಥವಾ**

*** ಸ್ವಚ್ಛತಾ ಆಂದೋಲನದಲ್ಲಿ ವಿದ್ಯಾರ್ಥಿಗಳ ಪಾತ್ರ.**

**ಪೀಠಿಕೆ –** ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು 02.10.2014 ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದರು.

**ವಿವರಣೆ –** ಪ್ರದಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ದೇಶದ ಅಭಿವೃದ್ಧಿಯ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹ ಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019 ಅಕ್ಟೋಬರ್ 2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯ ಧನ ನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ 'ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ' ಎಂಬುದಾಗಿದೆ. ಈ ಮಾಹಿತಿಯನ್ನು ಎಲ್ಲ ವಿದ್ಯಾರ್ಥಿಗಳು ತಮ್ಮಮನೆ ಹಾಗೂ ನೆರೆ–ಹೊರೆಯವರಿಗೆ ಮನವರಿಕೆ ಮಾಡಿಕೊಡುವುದು ಮತ್ತು ಅವರಲ್ಲಿ ಅರಿವು ಮೂಡಿಸುವುದು ಅವಶ್ಯವಾಗಿದೆ.

**ಉಪಸಂಹಾರ** – ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ. ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

# ದ್ವಿತೀಯ ಭಾಷೆ ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ 4

**ಹತ್ತನೇ ತರಗತಿ** **ಅಂಕಗಳು – 80** **ಅವಧಿ – 2.30ಗಂಟೆ**

**ಸೂಚನೆಗಳು:** ಪ್ರಶ್ನೆಪತ್ರಿಕೆಯು ಎ. ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಗಳನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

**ಭಾಗ – ಎ**

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?
ಉತ್ತರ: ಗಿಳಿಯ ಪರಹಿತಕಾಂಕ್ಷೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು.

2. ಈ ನಾಡಿನ ಬೆನ್ನೆಲಬು ಯಾರು?
ಉತ್ತರ: ರೈತ ಈ ನಾಡಿನ ಬೆನ್ನೆಲಬು.

3. ಪುಟ್ಟರಾಜರ ತಂದೆ ತಾಯಿಯರ ಹೆಸರೇನು?
ಉತ್ತರ: ಪುಟ್ಟರಾಜರ ತಂದೆ ರೇವಯ್ಯ, ತಾಯಿ ಸಿದ್ಧಮ್ಮ.

4. ಅಮೇರಿಕಾದಲ್ಲಿ ಗ್ಯಾನೇಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?
ಉತ್ತರ: ಅಮೇರಿಕಾದಲ್ಲಿ ಗ್ಯಾನೇಟ್ ಕಡಲಹಕ್ಕಿ ತನ್ನ ಗೂಡನ್ನು ಗಾಲ್ಫ್ ಚೆಂಡು, ನೀಲಿ ಶೀಶೆಯಚೂರು, ಈರುಳ್ಳಿ ಸಿಪ್ಪೆ, ಸಣ್ಣ ಬೊಂಬೆಯಿಂದ ಅಲಂಕರಿಸಿತ್ತು.

5. ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳು?
ಉ: ಗುರುಗಳು ಹೇಳಿದಂತೆ ಕಾಫೀ ಎಂದರೆ ಜೀವನ ಹಾಗೂ ಕಾಫೀಯ ಕಪ್ಪು ಹಣ, ಅಂತಸ್ತು, ಅಧಿಕಾರದ ಪ್ರತೀಕವಾಗಿವೆ.

6. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?
ಉ: ಏಣಿಯನ್ನು ಬಳಸಿ ಮೇಲೇರಿದವರು ಏಣಿಯನ್ನು ಮರೆತಾಗ ಅವರು ಹೇಗೆ ಮೇಲಿಂದ ಕೆಳಗೆ ಇಳಿಯುತ್ತಾರೆಂದು ಸವಾಲು ಹಾಕುತ್ತದೆ.

7. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?
ಉತ್ತರ: ಯುಗಾದಿಯ ಸಂದರ್ಭದಲ್ಲಿ ಬೆಲ್ಲ ಬೇವುಗಳನ್ನು ಹಂಚುವ ಸಂಪ್ರದಾಯವಿದೆ.

8. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ ?
ಉತ್ತರ: ವಿಸ್ತಾರವಾದ ಸಮುದ್ರದಂತೆ ಕಾಣುವ ಸೈನ್ಯವನ್ನು ಕಂಡು ಹೆದರಿ ಅವರೊಂದಿಗೆ ಯುದ್ಧಮಾಡಲಾಗದೆ ಹೆದರಿ, ಜೀವ ಭಯದಿಂದ ಉತ್ತರನು ನಿಟ್ಟೋಟದಲ್ಲಿ ಓಡಿದನು.

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.**

9. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?
ಉತ್ತರ: ಹಲವಾರು ವರ್ಷಗಳಿಂದ ಮರ ತನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ದುರದೃಷ್ಟದಿಂದ ಮರವನ್ನು ಈಗ ರೋಗ ಬಡತನಗಳು ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಮರವನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಮರಕ್ಕೆ ಕೃತಘ್ನನಾಗಲು ನನಗೆ ಇಷ್ಟವಿಲ್ಲವೆಂದು ಗಿಳಿ ಸಮರ್ಥಿಸಿಕೊಂಡಿತು.

10. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?
ಉತ್ತರ: ಹಕ್ಕಿಗಳಲ್ಲಿ ವಿಪರೀತವಾದ ಅಲಂಕಾರ ಪ್ರಜ್ಞೆ ಇದೆ. ಅವು ವರ್ಣಮಯ ಹೂದಳ, ಹೊಳೆಯುವ ಕಲ್ಲುಗಳನ್ನು ಹೆಕ್ಕಿ ತಂದು ಗೂಡಿನ ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಗಾಜಿನ ಚೂರು, ಚಿಂದಿ ಬಟ್ಟೆಯನ್ನು ತಂದು ಗೂಡುಗಳನ್ನು ಅಲಂಕರಿಸುತ್ತವೆ.

11. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು ?
ಉತ್ತರ: ಹಿರಿಯ ವಿದ್ಯಾರ್ಥಿಗಳು ತಮ್ಮ-ತಮ್ಮ ಜೀವನದ ತೊಂದರೆಗಳ ಬಗ್ಗೆ ಹೇಳಿಕೊಳ್ಳುತ್ತಿದ್ದರು. 'ಒಂದಲ್ಲ ಒಂದು ತಕರಾರು ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ. ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆಯೆ ಇಲ್ಲ. ಮಕ್ಕಳು ಬೆಳೆಯುತ್ತಿದ್ದಾರೆ.' ಅವರನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗಿದೆ. ಈ ರೀತಿಯಾಗಿ ಹೆಡ್ ಮಾಸ್ತರರ ಬಳಿ ಹಿರಿಯ ವಿದ್ಯಾರ್ಥಿಗಳು ತಮ್ಮ ಕಷ್ಟಗಳ ಸರಮಾಲೆಯನ್ನು ಹೇಳಿಕೊಳ್ಳುತ್ತಿದ್ದರು.

12. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?
ಉತ್ತರ : ಮೂರು-ನಾಲ್ಕು ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡಗಳ ಮೇಲೆ ಈ ಟವರ್ ಇದೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ. ರಾಜಮನೆತನಗಳಲ್ಲಿರುವ ವೈಷಮ್ಯ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ 1757 ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆ. ಆದ್ದರಿಂದ ಇದನ್ನು ನಿಗೂಢ ಸ್ಥಳ ಎಂದು ಕರೆಯುತ್ತಾರೆ.

13. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು ?
ಉತ್ತರ: ಥೇಮ್ಸ್ ನದಿಯ ಮೇಲೆ ಹದಿಮೂರು ಬ್ರಿಜ್‌ಗಳಿವೆ ಅದರಲ್ಲಿ ಟವರ್ ಬ್ರಿಜ್ ಪ್ರಮುಖವಾದುದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದುವರೆ ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿ ಕೊಡುತ್ತದೆ.

14. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು ?
ಉತ್ತರ: ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯು ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ ಹಾಗೂ ಸುರಕ್ಷಿತವೂ ಅಲ್ಲ. ಮೇಲೇರಿದವರು ಆಕಾಶದಲ್ಲಿ ಎಷ್ಟು ಹೊತ್ತು ಹಾರಾಡಿದರೂ ಒಂದಲ್ಲ ಒಂದು ದಿವಸ ಕೆಳಗಿಳಿಯಲೇ ಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಮರೆಯಬಾರದು. ಮರೆತರೆ ಅವರಿಗೆ ಒಳಿತಿಲ್ಲ ಎಂದು ಏಣಿ ಉಪದೇಶಿಸುತ್ತದೆ.

15. ಯುಗದ ಆದಿ ತಂದ ಸಂಭ್ರಮವೇನು ?
ಉತ್ತರ: ವಸಂತ ಋತುವಿನ ಚೈತ್ರದ ಮೊದಲದಿನವೇ ಯುಗಾದಿ ಬರುತ್ತದೆ. ಜಗತ್ತಿನ ಎಲ್ಲ ಜೀವಿಗಳಿಗೆ ಹೊಸ ಹುರುಪನ್ನು ತರುತ್ತದೆ. ಮರಗಿಡಗಳು ಚಿಗುರಿ ಫಲ-ಪುಷ್ಪಗಳಿಂದ ತುಂಬಿ ಬೀಗುತ್ತಿರುವಾಗ ಜಗಕೆಲ್ಲ ಹೊಸ ಕಳೆ ಬಂದಂತಾಗುತ್ತದೆ. ಎಲ್ಲೆಲ್ಲೂ ನೆಲದ ಮೇಲೆ ಬಣ್ಣ ಬಣ್ಣದ ಹೂಗಳನ್ನು ಹೊತ್ತ ನೆಲದಮ್ಮ ನವ ವಧುವಿನಂತೆ ಸಂಭ್ರಮಿಸುವುದನ್ನು ಕಾಣಬಹುದು.

16. ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುವುದಕ್ಕೆ ಕವಿ ಸಿ.ಪಿ.ಕೆ. ಅವರು ನೀಡಿರುವ ನಿದರ್ಶನಗಳಾವುವು ?
ಉತ್ತರ: ಸದ್ದು ಗದ್ದಲದೊಡನೆ ಮಾಡುವ ಕಾರ್ಯಗಳು ನಿಯಮಿತ ಸಮಯದಲ್ಲಿ ಪೂರ್ಣಗೊಳ್ಳುವುದಿಲ್ಲ. ಇದರಿಂದ ಮನಸ್ಸು ಉದ್ವೇಗಕ್ಕೆ ಒಳಗಾಗಿ ಅಶಾಂತಗೊಂಡು ಮಾಡುವ ಕಾರ್ಯ ಅಸಫಲತೆಗೊಳ್ಳುತ್ತದೆ. ಉದಾಹರಣೆಗೆ- ಹಸಿ ಸೌದೆ ಬುಸುಗುಟ್ಟಿ ದನಿಯನೆತ್ತುವಂತೆ, ಕಿಡಿ ಸೋಕಿದಾಗ ಸಿಡಿಮದ್ದು ಅಬ್ಬರಿಸುವಂತೆ ಬದುಕು ನಿಷ್ಪ್ರಯೋಜಕವಾಗುತ್ತದೆ ಎಂದು ಹೇಳುತ್ತಾರೆ.

17. ಕುಣಿಗಲ್ ಕೆರೆ ಎಂಥವರನ್ನು ಬೆರಗುಗೊಳಿಸುವಂತಿತ್ತು ಏಕೆ ?

ಉತ್ತರ: ಮೂಡಲ ದಿಕ್ಕಿನಲ್ಲಿರುವ ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗ. ಚಂದಿರ ಮತ್ತು ಕೆರೆ ಸಂಗಮವಾದ ದೃಶ್ಯ ನೋಡಲು ಜನರು ಬೆರಗುಗಣ್ಣಿನಿಂದ ಕಾಯುತ್ತಿರುತ್ತಾರೆ. ಇದು ಮನೋಹರವಾದ ದೃಶ್ಯವಾಗಿದೆ.

18. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು ?

ಉತ್ತರ: ಭೀಮನಾಯಕನು ವೈದ್ಯರ ಕಾಲ ಮೇಲೆ ಬಿದ್ದು ಹೇಳಿದ 'ಆ ಕಾಣದ ದೇವರು ಇದ್ದಾನೋ ಇಲ್ಲವೋ, ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು. ನಿಮ್ಮ ಉಪಕಾರವನ್ನು ನಾನೂ ಎಂದು ಮರೆಯಲಾರೆ.' ಎಂದು ಹೇಳುವ ಮೂಲಕ ಭೀಮನಾಯಕನು ವೈದ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸಿದನು.

19. ಬದುಕ ಬದುವ ಬೇಲಿ ಯಾವ ರೀತಿ ಇದೆ ?

ಉತ್ತರ. ಬದುಕ ಬದುವ ಬೇಲಿಯು ಹೊಂಗೆ ಮರದ ಜೋಲಿಯಲ್ಲಿ ಅರಳಿದ ಹೂವಿನಂತೆ, ಮಲ್ಲಿಗೆಯ ಹೂವಿನ ರೂಪಿನಂತೆ, ತಾಯಿಯ ನೆರಳಿನಂತೆ, ಕರುಳಿನ ಮಡಿಲಿನಂತೆ ಇದೆ.

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ**

20. ನೀರ ಕಂಡಲ್ಲಿ **ಮುಳುಗುವರಯ್ಯ**
**ಮರನ ಕಂಡಲ್ಲಿ ಸುತ್ತುವರಯ್ಯ**
**ಬತ್ತುವ ಜಲವ ಒಣಗುವ ಮರನ**
**ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು** ಕೂಡಲಸಂಗಮದೇವ.

ಅಥವಾ

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
**ಧನವಿದ್ದು ಫಲವೇನು ದಯವಿಲ್ಲದನ್ನಕ್ಕ**
**ಹಸುವಿದ್ದು ಫಲವೇನು ಹಯನವಿಲ್ಲದನ್ನಕ್ಕ**
**ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ**
**ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ**
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ**

21. "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ"

ಹೇಳಿಕೆ : ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದ ಅಸಿ–ಮಸಿ–ಕೃಷಿ ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. ಆಕರಗ್ರಂಥ – ವ್ಯಕ್ತಿತ್ವ ಎಂಬ ಪ್ರಬಂಧ ಸಂಕಲನ.

ಸಂದರ್ಭ : ರೈತರ ಮುಗ್ಧತೆ ಹಾಗೂ ವ್ಯವಸಾಯದ ಮಹತ್ವವನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.

ವಿವರಣೆ : ರೈತರು ಸಾಕಷ್ಟು ಬವಣೆಗಳನ್ನು ಎದುರಿಸುತ್ತಿದ್ದರೂ, ಎಂಥಹ ಸಂದಿಗ್ಧ ಪರಿಸ್ಥಿತಿಯಲ್ಲೂ ತಮ್ಮ ಕಾಯಕವನ್ನು ಬಿಡದೆ ನೇಗಿಲ ಯೋಗಿಗಳಾಗಿದ್ದಾರೆ. ಅವರಿಗೆ ಸಮಾಜ ದ್ರೋಹಿಗಳು ಮೋಸಮಾಡಿದರೂ, ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ.

22. "ಎಮ್ಮರಮನೆಯ ನಾರಿಯರೆ ಸಾಕು"

ಹೇಳಿಕೆ: ಪ್ರಸ್ತುತ ಈ ವಾಕ್ಯವನ್ನು ಕವಿ ಗದುಗಿನ ನಾರಾಣಪ್ಪ ರಚಿಸಿದ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಆಕಾರ ಗ್ರಂಥ– ಕರ್ನಾಟ ಭಾರತ ಕಥಾ ಮಂಜರಿ.

ಸಂದರ್ಭ: ಯುದ್ಧ ಭೂಮಿಯಲ್ಲಿ ಯುದ್ಧ ಮಾಡುವುದರಿಂದ ದೊರೆಯಬಹುದಾದ ಪದವಿ ಹಾಗೂ ಸುಖವನ್ನು ಕುರಿತು ಅರ್ಜುನ ಉತ್ತರನಿಗೆ ತಿಳಿಸುವಾಗ ಈ ಮಾತು ಬಂದಿದೆ.

ವಿವರಣೆ: ಯುದ್ಧ ಭೂಮಿಯಲ್ಲಿ ಯುದ್ಧ ಮಾಡುವುದರಿಂದ ದೊರೆಯುವ ಪುಣ್ಯವಾಗಲಿ, ಪದವಿಯಾಗಲಿ ನನಗೆ ಬೇಡ. ನಮ್ಮ ದೊರೆತನವೇ ನನಗೆ ಇಂದ್ರ ಪದವಿ, ಸುರರ ಸತಿಯರ ಸ್ಥಾನವನ್ನು ಎಮ್ಮರಮನೆಯ ನಾರಿಯರು ತುಂಬುತ್ತಾರೆ. ಎಂದು ಉತ್ತರಕುಮಾರನು ಅರ್ಜುನನಿಗೆ ಹೇಳುತ್ತಾನೆ.

**ಸಾಹಿತಿಗಳ ಕಾಲ, ಕೃತಿ, ಸ್ಥಳ ಕುರಿತು ವಾಕ್ಯ ರೂಪದಲ್ಲಿ ಪರಿಚಯ ಬರೆಯಿರಿ**

23. ರಮೇಶಗೌಡ ಎಂ.ಕೆ.

ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಅವರು ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಕಿತ್ತೂರು ಗ್ರಾಮದಲ್ಲಿ 1975ರಲ್ಲಿ ಜನಿಸಿದರು. ಇವರು ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕರಾದ ಇವರು ಅಮೃತಕ್ಕೆ ಹಾರಿದ ಗರುಡ, ರೂಪ ಬಯಲು, ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಕೃತಿಗಳನ್ನಲ್ಲದೆ ಮುಂತಾದ ಲೇಖನಗಳನ್ನು ಬರೆದಿದ್ದಾರೆ. ಇವರಿಗೆ ರತ್ನಾಕರವರ್ಣೀ ಮುದ್ದಣ್ಣ ದತ್ತಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ವರ್ಷದ ಉತ್ತಮ ಕೃತಿ' ಪ್ರಶಸ್ತಿಗಳು ಲಭಿಸಿವೆ.

24. ಬಸವರಜ ಸಬರದ

ಬಸವರಾಜ ಸಬರದ 1954ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದ್ದಾರೆ. ದಲಿತ–ಬಂಡಾಯ ಚಳುವಳಿಯ ನೇತಾರರಾದ ಇವರು ಜನಪರ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ನನ್ನವರ ಹಾಡು, ಹೋರಾಟ, ಮೂಡಲಕ ಕೆಂಪು ಮೂಡ್ಯಾನ, ನೂರು ಹನಿಗಳು, ದನಿಯೆತ್ತಿ ಹಾಡೇನ, ಬೆಳದಿಂಗಳು ಬಿಸಿಲಾತು, ಪದಕಟ್ಟಿ ಹಾಡೇನ ಮುಂತಾದ ಕವನ ಸಂಕಲನಗಳನ್ನು ಬರೆದಿದ್ದಾರೆ. ಪ್ರತಿರೂಪ, ರೆಕ್ಕೆ ಮೂಡಿದಾಗ, ನರಬಲಿ, ಬೆಳ್ಳಕ್ಕಿ ಸಾಲು – ಇವು ಇವರು ಬರೆದ ನಾಟಕಗಳು. ಶ್ರೀಯುತರಿಗೆ ದೇವರಾಜ ಬಹದ್ದೂರ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಪೆರ್ಲ್ ಕೃಷ್ಣಭಟ್ಟ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಸಾಹಿತ್ಯ ಶ್ರೀ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ**

25. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಬರೆಯಿರಿ.

ಉತ್ತರ: ಗೋಪಾಲನು ಬನಕ್ಕೆ ಹೋಗಿ ಪೂಜೆಗೆ ಹೂವುಗಳನ್ನು ಕೊಯ್ದು ತರುತ್ತಾನೆ. ತಾಯಿ ಮಗನಿಗೆ ಶಾಲೆಗೆ ತಡವಾಗುತ್ತದೆ, ಬೇಗ ಸ್ನಾನ ಮಾಡಿ ಗಂಜಿಯುಂಡು ಶಾಲೆಗೆ ಹೋಗು ಎಂದು ಹೇಳುತ್ತಾಳೆ. ಗೋಪಾಲನು ತಾಯಿಗೆ ನಾನೂ ಕಾಡಿನಲ್ಲಿ ಬರುವಾಗ ಹೆದರಿಕೆಯಾಗುತ್ತಿದೆ. ನನ್ನ ಸ್ನೇಹಿತರಿಗೆಲ್ಲ ಒಬ್ಬೊಬ್ಬ ಆಳುಗಳಿದ್ದಾರೆ ನನಗೆ ಮಾತ್ರ ಯಾರೂ ಇಲ್ಲ ಎನ್ನುತ್ತಾನೆ. ಆಗ ಗೋಪಾಲನ ತಾಯಿ ಅವರೆಲ್ಲ ಶ್ರೀಮಂತರ ಮಕ್ಕಳು, ನಾವು ಬಡವರು ನೂಲೂ ಮಾರಿ ಬಂದ ಮೂರು ಕಾಸಿನಲ್ಲಿ ಮನೆ ನಡೆಯಬೇಕು ಕಂದಾ ಆ ಭಗವಂತ ಕೊಡಬೇಕು ನಾವು ಉಣಬೇಕು. ನಿನಗೆ ಕಾಡಿನಲ್ಲಿ ಹೆದರಿಕೆಯಾದರೆ ನಿನ್ನ ಅಣ್ಣ ಕಾಡಿನಲ್ಲಿಯೇ ಇರುತ್ತಾನೆ ಅವನನ್ನು ಕರೆ ಎಂದು ಹೇಳುತ್ತಾಳೆ. ಈ ಸಂಭಾಷಣೆಯಲ್ಲಿ ಬಡತನದ ಬೇಗೆಯಲ್ಲಿದ್ದರೂ ದೇವರ ಮೇಲಿರುವ ಅಚಲವಾದ ನಂಬಿಕೆ ಮೆಚ್ಚುವಂತದ್ದಾಗಿದೆ.

**ಅಥವಾ**

* ಬನದ ಗೋಪಾಲನ ಹಾಡಿನ ಸಾರವನ್ನು ಬರೆಯಿರಿ.

ಉತ್ತರ: ಬನದ ಗೋಪಾಲನ ಹಾಡಿನ ಸಾರ ಈ ರೀತಿಯಾಗಿದೆ. ನಾನು ಯಾವಾಗಲೂ ತನ್ನನ್ನು ಜ್ಞಾನಿ ಎಂದು ತಿಳಿದವನ ಕೈಗೆ ಸಿಲುಕಲಾರೆ ಆದರೆ ಮಾನವನ ಪ್ರೀತಿಗೆ ಸೆರೆಯಾಗುತ್ತೇನೆ. ತಪಸ್ವಿಗಳು ನನ್ನನ್ನು ಕಾಣಲು ಬಹಳ ದಿನಗಳವರೆಗೂ ಕಠಿಣ ತಪಸ್ಸನ್ನು ಮಾಡುತ್ತಾ ನನ್ನನ್ನೂ ಹೊಂದಲು ಸಾಧನೆ ಮಾಡುವರು. ನಾನು ಮಲಗಲು ಸಮುದ್ರದ ವಿಸ್ತಾರ ಸಾಲದು ಆದರೆ ಭಕ್ತರ ಭಕ್ತಿಯ ಕಂಬನಿಯೇ ಮನೆ, ಭಕ್ತರ ಹೃದಯ ನನಗೆ ಹಿಮಗಿರಿಯಷ್ಟು ವಿಶಾಲವಾಗಿ ಕಾಣುತ್ತದೆ. ಬೃಂದಾವನದ ಗೋಪಿಕೆಯರು ಆಡುವ ಮಾತು ವೇದಗಳಿಗಿಂತ ಸತ್ಯವಾಗಿವೆ. ಹಾಲು

ಮಾರುವ ಸ್ತ್ರೀಯರ ಒಲುಮೆಯು ಯೋಗಿಗಳ ಸಾಧನೆಗಿಂತಲೂ ಮಿಗಿಲಾಗಿದೆ. ಎಂಬುದು ಶ್ರೀ ಕೃಷ್ಣನ ಹಾಡಿನ ಸಾರವಾಗಿದೆ.

26. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಉತ್ತರ: ಬದುಕಿಗೊಂದು ನಿಶ್ಚಿತ ಗುರಿ ಇರಬೇಕು. ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ಗುರಿ ಸಾಧನೆಯ ಮಾರ್ಗದಲ್ಲಿ ಹಲವಾರು ತೊಂದರೆಗಳು ಎದುರಾಗಬಹುದು, ಅವುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಮುಂದೆ ಸಾಗಬೇಕು. ಒಂದು ಬಾಣಕ್ಕೆ ಗುರಿ ಒಂದೆ, ದೇಹಕ್ಕೆ ಆತ್ಮ ಒಂದೆ ಇರುವಂತೆ ನಮ್ಮ ಜೀವನಕ್ಕೂ ಒಂದೇ ಹೆಗ್ಗುರಿ ಇರಬೇಕು. ಸ್ವಾರ್ಥವನ್ನು ತ್ಯಜಿಸಿ, ದೇಶದ ಅಭಿವೃದ್ಧಿಗೆ, ಸಮಾಜದ ಏಳಿಗೆಗೆ, ಪರರ ಹಿತಕ್ಕೆ, ನೊಂದವರ ಬದುಕಿಗೆ ಸಹಾಯ ಮಾಡುವುದು ನರನ ಜೀವನದ ಗುರಿಯಾಗಬೇಕೆಂದು ಅಡಿಗರು ಆಶಿಸಿದ್ದಾರೆ.

**ಅಥವಾ**

* ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ: ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು ಆಗ ಜೀವನ ಸಾರ್ಥಕತೆ ಹೊಂದುತ್ತದೆ. ಕಮಲ ಕೆಸರೊಳಗೆ ಹುಟ್ಟಿದರೂ ದೇವರ ಮುಡಿ ಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿ ಕಿರಣಗಳಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಟವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ತಲುಪುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.

**ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

'ಸಾಧಕನಾದವನು ಕನಸುಗಳನ್ನು ಕಾಣಬೇಕು' ಎಂದು ರಾಷ್ಟ್ರಪತಿಗಳಾಗಿದ್ದ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಹೇಳಿದ್ದಾರೆ. ದೊಡ್ಡದಾದ ಕನಸು ಕಾಣುವುದು ಅಂತಹ ದೊಡ್ಡ ಸಂಗತಿಯಲ್ಲ. ಆ ಕನಸಿನ ಕುರಿತು ಸಣ್ಣ ಪ್ರಯತ್ನ ಮಾಡುವುದೇ ದೊಡ್ಡ ಸಂಗತಿ. ಮನುಷ್ಯ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ. ಚಂದ್ರ, ಮಂಗಳನ ಮೇಲೆ ಅಡಿ ಇಟ್ಟಿರುವುದು ಯಾರೋ ಕಂಡ ಕನಸಿನ ಫಲದಿಂದ, ಕನಸನ್ನು ನೆರವೇರಿಸಿಕೊಳ್ಳಲು ಆತ್ಮಸ್ಥೈರ್ಯ ಇರಬೇಕು. ತನ್ನ ಮೇಲೆ ತನಗೆ ನಂಬಿಕೆ ಇರಬೇಕು. ಅಂದುಕೊಂಡದ್ದನ್ನು ಸಾಧಿಸಿಯೇ ತೀರುತ್ತೇನೆ ಎಂಬ ದೃಢ ಸಂಕಲ್ಪವಿರಬೇಕು. ಸಾಧನೆಯ ಹಾದಿಯಲ್ಲಿ ಸೋಲುಂಡರೆ ಕುಗ್ಗಬಾರದು. ಬದಲಿಗೆ ಧೈರ್ಯದಿಂದ ಎದುರಿಸುವ ದೃಢತೆ ಇರಬೇಕು. ಕಾಣುವ ಕನಸು ದೊಡ್ಡದಿದ್ದರೆ ಎದುರಾಗುವ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ.

**ಪ್ರಶ್ನೆಗಳು :**

27. ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಿಳಿಸುವಂತೆ ಎಂತಹ ಕನಸನ್ನು ಕಾಣಬೇಕು ?
ಉತ್ತರ: ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಿಳಿಸುವಂತೆ ದೊಡ್ಡ ಕನಸನ್ನು ಕಾಣಬೇಕು.

28. ಯಾರೋ ಕಂಡ ಕನಸಿನಿಂದ ಮನುಷ್ಯ ಎಲ್ಲಿಗೆ ಅಡಿ ಇಟ್ಟಿದ್ದಾನೆ ?
ಉತ್ತರ: ಯಾರೋ ಕಂಡ ಕನಸಿನಿಂದ ಮನುಷ್ಯ ಚಂದ್ರ ಹಾಗೂ ಮಂಗಳನ ಮೇಲೆ ಅಡಿ ಇಟ್ಟಿದ್ದಾನೆ.

29. ಕನಸು ನನಸು ಮಾಡಲು ಏನಿರಬೇಕು ?
ಉತ್ತರ: ಕನಸನ್ನು ನೆರವೇರಿಸಿಕೊಳ್ಳಲು ಆತ್ಮಸ್ಥೈರ್ಯ ಇರಬೇಕು.

30. ಯಾವಾಗ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ ?
ಉತ್ತರ: ಕಾಣುವ ಕನಸು ದೊಡ್ಡದಿದ್ದರೆ ಎದುರಾಗುವ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ.

## ಭಾಗ – ಬಿ

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಪರ್ಯಾಯ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

31. 'ಹುಲಿದೊಗಲು' ಪದವು ಈ ಸಂಧಿಗೆ ಉದಾಹರಣೆಯಾಗಿದೆ:
ಎ) ಲೋಪ ಬಿ) ಗುಣ ಸಿ) ಆದೇಶ ಡಿ) ವೃದ್ಧಿ
ಉತ್ತರ: ಸಿ) ಆದೇಶ

32. 'ಮಾನ' ಪದದ ವಿರುದ್ಧಾರ್ಥಕ ಪದ ಇದಾಗಿದೆ :
ಎ) ಸಂಮಾನ ಬಿ) ಅವಮಾನ ಸಿ) ಘನಮಾನ ಡಿ) ಅಭಿಮಾನ

ಉತ್ತರ: ಬಿ) ಅವಮಾನ
33. 'ಸಂಸ್ಕೃತ' ಪದದ ತದ್ಭವ ರೂಪವಿದು :
ಎ) ಸುಕೃತ ಬಿ) ಸಕ್ಕದ ಸಿ) ಸುಕ್ಕಾದ ಡಿ) ಸುಖದ
ಉತ್ತರ: ಬಿ) ಸಕ್ಕದ

34. 'ವಿಜ್ಞಾನಿ, ಪಂಡಿತ' ಪದಗಳು ನಾಮಸೂಚಕದ ಈ ಗುಂಪಿಗೆ ಸೇರುತ್ತವೆ :
ಎ) ರೂಢನಾಮ ಬಿ) ಭಾವನಾಮ ಸಿ) ಅಂಕಿತನಾಮ ಡಿ) ಅನ್ವರ್ಥನಾಮ
ಉತ್ತರ: ಡಿ) ಅನ್ವರ್ಥನಾಮ

35. 'ನೀನು, ನೀವು' ಈ ಪದಗಳು ಈ ಪುರುಷವಾಚಕ ಸರ್ವನಾಮದ್ದಾಗಿವೆ :
ಎ) ಉತ್ತಮ ಪುರುಷ ಬಿ) ಮಧ್ಯಮ ಪುರುಷ ಸಿ) ಪ್ರಥಮ ಪುರುಷ ಡಿ) ಅನ್ಯ ಪುರುಷ
ಉತ್ತರ: ಬಿ) ಮಧ್ಯಮ ಪುರುಷ

36. 'ಬೆಟ್ಟವನ್ನು' ಪದದಲ್ಲಿ ಬಂದಿರುವ ವಿಭಕ್ತಿಯ ಹೆಸರು :
ಎ) ಪ್ರಥಮ ಬಿ) ದ್ವಿತೀಯ ಸಿ) ತೃತೀಯ ಡಿ) ಚತುರ್ಥಿ
ಉತ್ತರ: ಬಿ) ದ್ವಿತೀಯ

37. "ಬಾಳೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ" ಈ ವಾಕ್ಯದಲ್ಲಿರುವ ಅಲಂಕಾರ :
ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷೆ ಡಿ) ಅರ್ಥಾಂತರನ್ಯಾಸ
ಉತ್ತರ: ಎ) ಉಪಮಾ

38. 'ನಗರ' ಪದಕ್ಕೆ ಪ್ರಸ್ತಾರ ಹಾಕಿದಾಗ ಮಾತ್ರೆಗಳ ಸಂಖ್ಯೆ
ಎ) ಮೂರು ಬಿ) ನಾಲ್ಕು ಸಿ) ಐದು ಡಿ) ಆರು
ಉತ್ತರ: ಎ) ಮೂರು

39. 'ನಿಟ್ಟೋಟ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ತತ್ಪುರುಷ ಬಿ) ದ್ವಿಗು ಸಿ) ಕರ್ಮಧಾರೆಯ ಡಿ) ಗಮಕ

ಉತ್ತರ: ಸಿ) ಕರ್ಮಧಾರೆಯ

40. 'ಸುವರ್ಣ' ಪದದ ಅರ್ಥ :

ಎ) ಬಂಗಾರ ಬಿ) ಬೆಳ್ಳಿ ಸಿ) ಕಂಚು ಡಿ) ತಾಮ್ರ

ಉತ್ತರ: ಎ) ಬಂಗಾರ

41. 'ಹೊಚ್ಚಹೊಸದು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :

ಎ) ದ್ವಿರುಕ್ತಿ ಬಿ) ಜೋಡಿಪದ ಸಿ) ಅನುಕರಣ ಡಿ) ಕೃದಂತ

ಉತ್ತರ: ಎ) ದ್ವಿರುಕ್ತಿ

42. ಬನದಲ್ಲಿ ಏನಮ್ಮ ಸೊಗಸು ! ಈ ವಾಕ್ಯದಲ್ಲಿ ಬಂದಿರುವ ಲೇಖನ ಚಿನ್ಹೆ :

ಎ) ಭಾವಸೂಚಕ ಬಿ) ಪ್ರಶ್ನಾರ್ಥಕ ಸಿ) ವಾಕ್ಯವಿಶೇಷಣ ಡಿ) ಅರ್ಧವಿರಾಮ

ಉತ್ತರ: ಎ) ಭಾವಸೂಚಕ

## ಭಾಗ – ಸಿ

**ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.**

43. * ಮಾತು ಬೆಳ್ಳಿ ಮೌನ ಬಂಗಾರ
    * ಹಕ್ಕಿಗಳಿಗೆ ಗೂಡು; ಮಕ್ಕಳಿಗೆ ತಾಯಿ
    * ದೇಶ ಸುತ್ತಿ ನೋಡು; ಕೋಶ ಓದಿ ನೋಡು

**'ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ.'**

ಪೀಠಿಕೆ : ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಮೂಡಿ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ವಿಶೇಷ ಅರ್ಥದಿಂದ ಕೂಡಿರುತ್ತವೆ.

ವಿವರಣೆ : ಹಕ್ಕಿಗಳ ಆಶ್ರಯ ತಾಣ ಗೂಡು. ಹಕ್ಕಿ ಮತ್ತು ಗೂಡಿಗೆ ಅವಿನಾಭಾವ ಸಂಬಂಧವಿದೆ. ಅದರಂತೆ ತಾಯಿ ಮತ್ತು ಮಕ್ಕಳಲ್ಲಿಯೂ ಅನೋನ್ಯವಾದ ಪ್ರೀತಿಯ ಸಂಬಂಧವಿದೆ ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಪ್ರತಿಯೊಬ್ಬರಿಗೂ ಕಣ್ಣಿಗೆ ಕಾಣುವ ದೇವರೆಂದರೆ ತಾಯಿಯಾಗಿದ್ದಾಳೆ. 'ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ' ಮೇಲಿನ ಗಾದೆಗೆ ಸಮಾನ ಅರ್ಥಕೊಡುವ ಗಾದೆ ಮಾತಾಗಿದೆ.

*** ದೇಶ ಸುತ್ತಿ ನೋಡು; ಕೋಶ ಓದಿ ನೋಡು**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – 'ದೇಶ ಸುತ್ತಿ ನೋಡು, ಕೋಶ ಓದಿ ನೋಡು.' ಇದೊಂದು ಪ್ರಚಲಿತದಲ್ಲಿರುವ ಗಾದೆಮಾತಾಗಿದೆ. ಜ್ಞಾನ ಸಂಪಾಧನೆಯು ಪ್ರವಾಸ ಮಾಡುವುದರಿಂದ ಇಲ್ಲವೇ ಪುಸ್ತಕ ಓದುವುದರಿಂದ ಸಾಧ್ಯವಾಗುತ್ತದೆ ಎಂಬುದು ಈ ಗಾದೆಮಾತಿನ ಅರ್ಥವಾಗಿದೆ. ಪ್ರವಾಸ ಮಾಡುವುದು ಎಲ್ಲರಿಂದಲೂ ಸಾಧ್ಯವಿಲ್ಲ ಆದರೆ ಜ್ಞಾನ ಭಂಡಾರದ ಕೀಲಿ ಕೈಯಂತಿರುವ ಪುಸ್ತಕವನ್ನು ಓದುವುದು ಎಲ್ಲರಿಂದಲೂ ಸಾಧ್ಯ ಎಂಬುದು ಈ ಗಾದೆ ಮಾತಿನ ವೈಶಿಷ್ಟ್ಯವಾಗಿದೆ.

44. ನೀವು ಹಾಸನ ಜಿಲ್ಲೆ ರಾಮನಾಥಪುರದಲ್ಲಿ ವಾಸವಾಗಿರುವ ರಚನಾ ಎಂದು ಭಾವಿಸಿಕೊಂಡು ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ

ಇವರಿಂದ
ರಚನಾ
ರಾಮನಾಥಪುರ
ಹಾಸನ ಜಿಲ್ಲೆ
ದಿನಾಂಕ 15.02.2018

ಇವರಿಗೆ,
ಮಾನ್ಯ ಅಧ್ಯಕ್ಷರು
ಗ್ರಾಮ ಪಂಚಾಯತ ರಾಮನಾಥಪುರ
ಹಾಸನ ಜಿಲ್ಲೆ

ವಿಷಯ : ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ಮನವಿ ಪತ್ರ.

ಮಾನ್ಯರೇ,

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ರಚನಾ ರಾಮನಾಥಪುರ ನಿವಾಸಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ರಾಮನಾಥಪುರದ ಮುಖ್ಯ ಬೀದಿಯಲ್ಲಿರುವ ಬೀದಿ ದೀಪಗಳು ಕೆಟ್ಟು ಹೋಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ಮುದುಕರು, ಮಕ್ಕಳು ರಾತ್ರಿ ವೇಳೆಯಲ್ಲಿ ಸಂಚರಿಸಲು ತುಂಬಾ ತೊಂದರೆಯಾಗುತ್ತಿದೆ. ಕಾರಣ ದಯಾಳುಗಳಾದ ತಾವು ಆದಷ್ಟು ಬೇಗನೆ ಬೀದಿ ದೀಪಗಳನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿ

ವಂದನೆಗಳು

ಸ್ಥಳ – ರಾಮನಾಥಪುರ

ತಮ್ಮ ವಿಶ್ವಾಸಿ
ರಚನಾ

**ಅಥವಾ**

ನೀವು ಮೈಸೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಸಲ್ಮಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಬರುವಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಇರುವ ನಿಮ್ಮ ಗೆಳತಿ ರೇಷ್ಮಾಳಿಗೆ ಒಂದು ಪತ್ರ ಬರೆಯಿರಿ.

ಇವರಿಂದ
ಸಲ್ಮಾ 10ನೇ ತರಗತಿ
ಸ. ಪ್ರೌ. ಶಾಲೆ ಕುವೆಂಪು ನಗರ ಮೈಸೂರ
ದಿನಾಂಕ 10.02.2017

ಆತ್ಮೀಯ ಗೆಳತಿ ರೇಷ್ಮಾಳಿಗೆ, ಸಲ್ಮಾ ತಿಳಿಸುವ ವಂದನೆಗಳು.

ಈಗ ಪತ್ರ ಬರೆಯಲು ಕಾರಣವೆಂದರೆ ನಾನೂ ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ನಮ್ಮ ಶಾಲೆಯಲ್ಲಿ ದಿನಾಂಕ 01.03.2018ರಂದು ಶಾಲಾ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ. ಸಮಾರಂಭದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸಿದ್ದೇನೆ ಆದ್ದರಿಂದ ಸದರಿ ಕಾರ್ಯಕ್ರಮಕ್ಕೆ ನೀನು ತಪ್ಪದೆ ಬರಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಮನೆಯಲ್ಲಿ ತಾಯಿ, ಅಕ್ಕ, ಅಣ್ಣ ಇವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸು.

ವಂದನೆಗಳು

ನಿನ್ನ ಆತ್ಮೀಯ ಗೆಳತಿ
ಸಲ್ಮಾ

ವಿಳಾಸ
ರೇಷ್ಮಾ , ಹತ್ತನೇ ತರಗತಿ.
ಸರ್ಕಾರಿ ಪ್ರೌಢ ಶಾಲೆ
ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

**ಕೆಳಗಿನ ಯಾವುದಾದರೊಂದು ವಿಷಯ ಕುರಿತುಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

45. * ಜಲ ಮಾಲಿನ್ಯಕ್ಕೆ ಕಾರಣಗಳು ಮತ್ತು ಪರಿಹಾರಗಳು
    * ವಿದ್ಯಾರ್ಥಿಗಳಲ್ಲಿ ಶಿಸ್ತು
    * ಸ್ವಚ್ಛತಾ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

## * ಜಲ ಮಾಲಿನ್ಯಕ್ಕೆ ಕಾರಣಗಳು ಮತ್ತು ಪರಿಹಾರಗಳು

ಪೀಠಿಕೆ : ಮಾನವನ ಅತೀ ಮುಖ್ಯ ಅವಶ್ಯಕತೆಗಳಲ್ಲಿ ಒಂದಾದ ನೀರು ಇಂದು ಸಮರ್ಪಕವಾಗಿ ದೊರೆಯುತ್ತಿಲ್ಲ. ಕಾರಣ ಪರಿಸರ ಮಾಲಿನ್ಯ. ಪರಿಸರ ಮಾಲಿನ್ಯದ ಒಂದು ಅಂಗವೇ ಜಲಮಾಲಿನ್ಯ. ಮಾಲಿನ್ಯವು ಇದೇ ರೀತಿ ಮುಂದುವರೆದರೆ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ ದೊರೆಯದೆ ಜೀವ ಸಂಕುಲ ತೊಂದರೆಗೆ ಒಳಗಾಗುತ್ತದೆ. ಆದ್ದರಿಂದ ಜಲಮಾಲಿನ್ಯವನ್ನು ತಡೆಗಟ್ಟುವುದು ನಮ್ಮೆಲ್ಲರ ಹೊಣೆಯಾಗಿದೆ.

ವಿವರಣೆ : ನಿಸರ್ಗದ ಅಮುಲ್ಯ ಕೊಡುಗೆಗಳಲ್ಲಿ ಒಂದಾದ ನದಿಗಳು ಕಾರ್ಖಾನೆಗಳು ಹೊರ ಹಾಕುವ ಹೊಲಸು ನೀರಿನಿಂದ ಕಲುಷಿತಗೊಂಡಿವೆ. ರಾಸಾಯನಿಕ ಗೊಬ್ಬರ ಬಳಕೆ, ಪ್ಲಾಸ್ಟಿಕ್ ಬಳಕೆ, ಗಣಿಗಾರಿಕೆ ಇವೆಲ್ಲದರಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿವೆ. ಮಣ್ಣಿನ ಸವೆತದಿಂದ ಜಲಮೂಲಗಳಲ್ಲಿ ಹೂಳು ತುಂಬಿ ಅಂತರ್ಜಲ ಮಟ್ಟ ಕುಸಿಯುತ್ತಿದೆ.

ಉಪಸಂಹಾರ : ಜೀವಾಮೃತವಾದ ಜಲವನ್ನು ಇಂದು ನಾವು ಸಂರಕ್ಷಿಸಬೇಕಾಗಿದೆ. ಮಳೆಕೊಯ್ಲಿನಂತ ಮಾರ್ಗಗಳನ್ನು ಅನುಸರಿಸುವುದು ಅವಶ್ಯಕವಾಗಿದೆ.

# ದ್ವಿತೀಯ ಭಾಷೆ ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ 5

**ಹತ್ತನೇ ತರಗತಿ** **ಅಂಕಗಳು – 80** **ಅವಧಿ– 2.30ಗಂಟೆ**

**ಸೂಚನೆಗಳು :** ಪ್ರಶ್ನೆಪತ್ರಿಕೆಯು ಎ. ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಗಳನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ. ಉತ್ತರಗಳು ನೇರವೂ, ಸ್ಪಷ್ಟವೂ ಆಗಿದ್ದು ಅಂಕಗಳಿಗೆ ತಕ್ಕಂತೆ ವಿಸ್ತಾರವಿರಲಿ.

## ಭಾಗ – ಎ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ದೇಶದ ಉದ್ಧಾರ ಯಾರ ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ?
ಉತ್ತರ: ದೇಶದ ಉದ್ಧಾರ ಸೈನಿಕ, ಸಾಹಿತಿ ಹಾಗೂ ರೈತರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ.

2. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
ಉತ್ತರ: ಹಕ್ಕಿಯ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ–ಬೇಟೆ ಸಂಬಂಧಗಳು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತವೆ.

3. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?
ಉ: ಕಾಫೀ ಎನ್ನುವ ಜೀವನಕ್ಕಿಂತ ಕಾಫೀ ಕಪ್ಪು ಎಂಬ ಹಣ, ಅಧಿಕಾರ, ಅಂತಸ್ತುಗಳಿಗೆ ಬೆಲೆಕೊಟ್ಟು ಮತ್ತೊಬ್ಬರ ಕಪ್ಪನ್ನು ನೋಡಿ ಅಸುಯೆ ಪಡುತ್ತೇವೆ. ಇದು ದುರ್ದೈವದ ಸಂಗತಿ ಎಂದು ಗುರುಗಳು ಹೇಳಿದರು.

4. ಲಂಡನ್‌ನಲ್ಲಿದ್ದ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವವು ?
ಉತ್ತರ: ಲಂಡನ್‌ನಲ್ಲಿ ಕೇಂಬ್ರಿಡ್ಜ್ ಹಾಗೂ ಆಕ್ಸ್‌ಫರ್ಡ್ ಎರಡು ಪ್ರಸಿದ್ಧ ವಿಶ್ವವಿದ್ಯಾಲಯಗಳಿವೆ

5. ಲಂಡನ್‌ನಲ್ಲಿ ಹರಿಯುವ ಪ್ರಸಿದ್ಧ ನದಿ ಯಾವುದು ?
ಉತ್ತರ: ಲಂಡನ್‌ನಲ್ಲಿ ಹರಿಯುವ ಪ್ರಸಿದ್ಧ ನದಿ ಥೇಮ್ಸ್.

6. ಕವಯಿತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ ?
ಉತ್ತರ: ಮೇಲೇರಲು ಸಹಾಯ ಮಾಡಿದವರನ್ನು ಮೇಲೇರಿದನಂತರ ಮರೆತು ಬಿಡುತ್ತಾರೆ. ಅವರನ್ನು ಕವಯಿತ್ರಿ ತ್ರಿಶಂಕುಗಳು ಎಂದು ಕರೆದಿದ್ದಾರೆ.

7. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?
ಉತ್ತರ. ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.

**8. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?**
ಉತ್ತರ: ಬದುಕಿನಲ್ಲಿ ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕೆಂದು ಅಡಿಗರು ಹೇಳುತ್ತಾರೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರ ಬರೆಯಿರಿ.**

9. ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?
ಉತ್ತರ. ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿಗಳು ಬಹು ಸುಂದರವಾಗಿ ತಮ್ಮ ಗೂಡನ್ನು ಅಲಂಕರಿಸುತ್ತವೆ. ಕೇವಲ ಎರಡು ಒಣ ಕಡ್ಡಿಯನ್ನು ಅಪ್ಪಿ ಹಿಡಿದಂತೆ ಗುರುತ್ವಾಕರ್ಷಕವಾಗಿ ಸಮತೋಲನವನ್ನು ಕಾಯ್ದಿಟ್ಟುಕೊಂಡು ಬಟ್ಟಲಾಕಾರದ ಗೂಡನ್ನು ನಿರ್ಮಿಸುತ್ತವೆ. ಹೊರಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ಧಿಷ್ಟ ಅಂತರದಲ್ಲಿ ಜೋಡಿಸಿ ಶತ್ರುಗಳ ಕಣ್ಣಿಗೆ ಗೂಡು ಕಾಣದಂತೆ ನೋಡಿಕೊಳ್ಳುತ್ತವೆ.

10. ಹೆಡ್ ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು ?

ಉತ್ತರ: ಹೆಡ್ ಮಾಸ್ತರರು 'ಮಕ್ಕಳೆ ಒಂದು ಐದು ನಿಮಿಷ ಇರಿ, ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು. ಆದರೆ ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ'. ಎಂದು ಹೇಳಿ ಜೋರಾಗಿ ನಕ್ಕು ಅಡುಗೆ ಮನೆಗೆ ಹೊದರು.

11. ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಕುರಿತು ಗೈಡ್ ತಿಳಿಸಿದ ವಿಚಾರಗಳೇನು ?

ಉತ್ತರ: 1666 ರಲ್ಲಿ ಲಂಡನ್‌ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ ಮೂರು ದಿನಗಳ ಕಾಲ ಲಂಡನ್ ನಗರ ಹೊತ್ತಿ ಉರಿಯಿತು. ಅದರಲ್ಲಿ 13000 ಮನೆಗಳು, 80 ಚರ್ಚ್‌ಗಳು ಸುಟ್ಟು ಹೊದವು. ಈ ದುರಂತದ ನೆನಪಿಗಾಗಿ ಎರಡು ನೂರು ಅಡಿ ಎತ್ತರದ ಸ್ತಂಭ ನಿಲ್ಲಿಸಿದ್ದಾರೆ. ಅದಕ್ಕಿಂತ ಒಂದೆರಡು ವರ್ಷದ ಹಿಂದೆ ಪ್ಲೇಗ್ ಎಂಬ ಸಾಂಕ್ರಾಮಿಕ ರೋಗಕ್ಕೆ 13000 ಜನರು ಸತ್ತು ಹೋದ ದುರಂತಗಳನ್ನು ಗೈಡ್ ತಿಳಿಸಿದರು.

12. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?
ಉತ್ತರ: ಗೋಪಾಲನ ತಾಯಿ ಬಡ ಹೆಂಗಸು, ವಿಧವೆ ಬಹಳ ಬಡತನದಲ್ಲಿ ಜೀವನ ನಡೆಸುತ್ತಿದ್ದಳು. ಒಂದು ಸಣ್ಣಗುಡಿಸಲು, ಅದರ ಜಗುಲಿಯ ಮೇಲೆ ಒಂದು ಮೂಲೆಯಲ್ಲಿ ಗೋಪಾಲನ ಸಣ್ಣ ವಿಗ್ರಹವಿರುವ ದೇವರ ಗೂಡು. ಅವಳು ಚರಕದ ಮುಂದೆ ಕುಳಿತು ನೂಲನ್ನು ನೂಲುತ್ತಿದ್ದಳು. ನೂಲೂ ಮಾರಿ ಬಂದ ಮೂರು ಕಾಸಿನಲ್ಲಿ ಸಂಸಾರ ಸಾಗಿಸುತ್ತಿದ್ದಳು.

13. ಬನದ ಗೋಪಾಲನ ವೇಷಭೂಷನಗಳು ಹೇಗಿದ್ದವು?
ಉ: ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲು ಗರಿ, ಕೈಯಲೊಂದು ಕೊಳಲು ಇವು ಬನದ ಗೋಪಾಲನ ವೇಷಭೂಷನಗಳು.

14. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?
ಉ: ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯು ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ ಹಾಗೂ ಸುರಕ್ಷಿತವೂ ಅಲ್ಲ. ಮೇಲೇರಿದವರು ಆಕಾಶದಲ್ಲಿ ಎಷ್ಟು ಹೊತ್ತು ಹಾರಾಡಿದರೂ ಒಂದಲ್ಲ ಒಂದು ದಿವಸ ಕೆಳಗಿಳಿಯಲೇ ಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಮರೆಯಬಾರದು. ಮರೆತರೆ ಅವರಿಗೆ ಒಳಿತಿಲ್ಲ ಎಂದು ಏಣಿ ಉಪದೇಶಿಸುತ್ತದೆ.

15. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?
ಉತ್ತರ: ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ದೂರದಿಂದ ಕೋಗಿಲೆಯ ಹಾಡೊಂದು ಕೇಳಿ ಬಂದಂತೆ, ಬಾನಿನಲ್ಲಿ ಬೆಳ್ಳಿಚುಕ್ಕಿ ಮೂಡಿದಂತೆ, ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಂತೆ ಆಯಿತೆಂದು ಬಣ್ಣಿಸಿದ್ದಾರೆ.

16. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?
ಉತ್ತರ: ಕರ್ಪೂರವು ತಟ್ಟೆಯೊಳಗೆ ಶಾಂತರೀತಿಯಿಂದ ಕರಗುತ್ತಾ ಕತ್ತಲೆಯು ನಿಲ್ಲದೆ ಸರಿದು ಹೋಗುವಂತೆ ಮಾಡುತ್ತದೆ. ಅದರಂತೆ ನಾವೂ ಬದುಕಿನಲ್ಲಿ ನಮ್ಮ ಕರ್ತವ್ಯವನ್ನು ಶಾಂತರೀತಿಯಿಂದ ಮಾಡಿ ಮುಗಿಸಬೇಕು. ಮಾಡುವ ಕೆಲಸವನ್ನು ಯಾರಿಗೂ ಅರಿವಾಗದಂತೆ ಮಾಡಬೇಕು.

17. ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?
ಉತ್ತರ: ಬಲೆಯಲ್ಲಿ ಸಿಕ್ಕಿಕೊಂಡ ಮೀನುಗಳನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ವಿಲವಿಲ ಒದ್ದಾದುವ ಪರಿಯನ್ನು ಜನಪದರು ಬೊಬ್ಬೆ ಹೊಡೆದಾವೆ ಬಾಳೆಮೀನು ಎಂದು ವರ್ಣಿಸಿದ್ದಾರೆ.

18. ವೈದ್ಯರು ತಮ್ಮ ಸೇವೆಯಿಂದ ಯಾವ ಪ್ರತಿಫಲಗಳು ದೊರೆತಿವೆ ಎಂದು ತಮ್ಮ ಹೆಂಡತಿಗೆ ಹೇಳಿದ್ದಾರೆ ?
ಉತ್ತರ: ವೈದ್ಯರು ಮೊಗಸಾಲೆಯಲ್ಲಿ ತಮ್ಮ ಹೆಂಡತಿಯೊಂದಿಗೆ ಮಾತನಾಡುತ್ತಾ, 'ನೋಡು ರತ್ನಾ ನನ್ನ ವೈದ್ಯಕದ ಪ್ರಾವಿಣ್ಯ, ಒಬ್ಬ ತಾಯಿಯ ಕರುಳನ್ನು ಸಂತಯಿಸಿತು. ಒಬ್ಬ ತಂದೆಯ ಕುಲವನ್ನು ಮುಂದುವರೆಸಿತು' ಎಂದು ಸಂತಸದಿಂದ ಹೇಳುತ್ತಾರೆ.

19. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?
ಉತ್ತರ: ಹೊಳೆಯ ದಂಡೆಯ ಸಾಲಿನಲ್ಲಿ ರಾಜ್ಯಗಳು ಹುಟ್ಟಿ ರಾಜ್ಯಗಳು ಅಳಿದು ಹೋದ ಹಾಗೂ ನೇಗಿಲಯೋಗಿ ಶತಶತಮಾನಗಳಿಂದ ನಡೆಸಿದ ಸಂತೆ, ಜಾತ್ರೆ, ಗೊಬ್ಬರದ ಹಾಡಿನ ನೆನಪುಗಳಿವೆ.

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ.**

20. ಕೆಸರೊಳಿದ್ದರು **ಮೇಲೆ ಬಾಂದಳವ ನೋಡಿ**
**ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ**
**ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ**
**ಬಸಮಾಗು, ಬಂದ ಮನುಜತೆಯ** ಸಾರ್ಥಕತೆಗೆ.

**ಅಥವಾ**

ಒಂದು ಬಾಣಕೆ **ಗುರಿಯು ಹಲವಿರುವುದುಂಟೆ**?
**ಒಂದು ದೇಹದೊಳಾತ್ಮವೆರಡಿರುವುದುಂಟೆ**?
**ಒಂದು ಜೀವನಕೇಕೆ ಹಲವು ಸಾಧ್ಯಗಳು**?
**ಒಂದೆ ಹೆಗ್ಗುರಿಗೆ ಹೋರಾಡು** ಹಗಲಿರುಳು.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ.**

21. "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ"
ಹೇಳಿಕೆ : ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದ ಅಸಿ–ಮಸಿ–ಕೃಷಿ ಎಂಬ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. ಆಕರಗ್ರಂಥ – ವ್ಯಕ್ತಿತ್ವ ಎಂಬ ಪ್ರಬಂಧ ಸಂಕಲನ.
ಸಂದರ್ಭ : ಕೃಷಿಯ ಮಹತ್ವ ಮತ್ತು ರೈತರು ಎದುರಿಸುತ್ತಿರುವ ಕಷ್ಟವನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.
ವಿವರಣೆ : ರೈತರು ಸಾಕಷ್ಟು ಬವಣೆಗಳನ್ನು ಎದುರಿಸುತ್ತಿದ್ದಾರೆ. ಹವಾಮಾನದಲ್ಲಿ ಏರುಪೇರು, ಮಳೆಯ ಅಭಾವ, ಅತಿವೃಷ್ಟಿ, ಉತ್ತಮ ಬೀಜಗಳ ಕೊರತೆ, ಭೂಮಿ ಬರಡಾಗುತ್ತಿರುವುದು, ಇವಲ್ಲದೆ ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗುತ್ತಿಲ್ಲ. ರೈತರು ಇಷ್ಟೆಲ್ಲ ಸಮಸ್ಯೆಗಳನ್ನು ಅನುಭವಿಸುತ್ತಿದ್ದರೂ ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ.

22. "ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ"
ಹೇಳಿಕೆ: ಈ ಸಾಲನ್ನು ಅಕ್ಕಮಹಾದೇವಿತಾಯಿಯವರ ವಚನದಿಂದ ಆರಿಸಲಾಗಿದೆ. ಆಕರ ಗ್ರಂಥ – ಕರ್ನಾಟಕ ಸರ್ಕಾರದ ಸಮಗ್ರ ವಚನ ಸಂಪುಟ.
ಸಂದರ್ಭ: ಅಕ್ಕ ನಿರಾಕಾರ ಪರಮಾತ್ಮನ ಜ್ಞಾನವನ್ನು ಅರಿತಾಗ ಜೀವನ ಸಾರ್ಥಕವಾಗುತ್ತದೆ ಎಂದು ಹೇಳುವಾಗ ಈ ಮಾತನ್ನು ಹೇಳಿದ್ದಾಳೆ.
ವಿವರಣೆ: ಅನ್ನದ ಬಟ್ಟಲು ಇದ್ದು, ಅದರಲ್ಲಿ ಅನ್ನವೇ ಇಲ್ಲದಿದ್ದಲ್ಲಿ ಏನು ಪ್ರಯೋಜನ? ಹಾಗೇ ದೇವರನ್ನು ಅರಿಯದ ನಾವು ಮಾನವರಾಗಿ ಏನು ಪ್ರಯೋಜನ? ಎಂದು ಹೇಳುತ್ತಾ, ಚನ್ನಮಲ್ಲಿಕಾರ್ಜುನದೇವಾ ನಿಮ್ಮ ಜ್ಞಾನವನ್ನು ಅರಿಯದ ನಾನಿದ್ದು ಫಲವೇನು? ಎಂದು ನಿರಾಕಾರ ಪರಮಾತ್ಮನಲ್ಲಿ ಆತ್ಮ ನಿವೇದನೆ ಮಾಡಿಕೊಳ್ಳುತ್ತಾರೆ.

**ಸಾಹಿತಿಗಳ ಕಾಲ, ಕೃತಿ, ಸ್ಥಳ ಕುರಿತು ವಾಕ್ಯ ರೂಪದಲ್ಲಿ ಪರಿಚಯ ಬರೆಯಿರಿ.**

23. ಅ.ರಾ.ಮಿತ್ರ

ಅ.ರಾ.ಮಿತ್ರ (ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ) ಅವರು ಹೊಸಗನ್ನಡದ ಪ್ರಸಿದ್ಧ ಲೇಖಕರಾಗಿದ್ದಾರೆ. 1935ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳುವಿನಲ್ಲಿ ಜನಿಸಿದ ಇವರು ಉಪನ್ಯಾಸಕರಾಗಿ, ರೀಡರ್, ಪ್ರೋಫೆಸರ್, ಪ್ರಿನ್ಸಿಪಾಲ್‌ರಾಗಿ ಸೇವೆ ಸಲ್ಲಿಸುತ್ತಾ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡು ಆರತಕ್ಷತೆ ಮತ್ತು ಇತರ ಪ್ರಬಂಧಗಳು, ನಾನೇಕೆ ಕೊರೆಯುತ್ತೇನೆ, ಛಂದೋಮಿತ್ರ, ಕನ್ನಡ ಮೇಘದೂತ, ಮಹಾಭಾರತ ಪಾತ್ರ ಸಂಗತಿಗಳು, ವಚನಕಾರರು ಮತ್ತು ಶಬ್ಧಕಲ್ಪ, ಒಳನೋಟಗಳು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ನಿವೃತ್ತ ಜೀವನವನ್ನು ಬೆಂಗಳೂರಿನಲ್ಲಿ ಕಳೆಯುತ್ತಿದ್ದಾರೆ.

24. ಬಸವರಜ ಸಾದರ

ಬಸವರಾಜ ಸಾದರ ಅವರು 1955 ರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಜನಿಸಿದ್ದಾರೆ. ಇವರ ತಂದೆ ಚೆನ್ನಬಸಪ್ಪ ತಾಯಿ ಚೆನ್ನವ್ವ. ಸ್ನಾತಕೋತ್ತರ ಪದವಿದರರಾದ ಇವರು ಬೆಂಗಳೂರು ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿದ್ದರು. ಸಿಸಿಫಸರ ಸುತ್ತು, ತಪ್ದಂಡ, ಅನುಮತಿ ಇವರು ಬರೆದ ಪ್ರಮುಖ ಕೃತಿಗಳಾಗಿವೆ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

25. ಅಂಗಹೀನತೆ ಸಾಧನೆಗೆ ಅಡ್ಡಿಯಾಗದು – ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ ಹೇಗೆ ? ವಿವರಿಸಿ.
ಉತ್ತರ: ಪುಟ್ಟರಾಜರು ಪಾಣಿನಿಯ **ಅಷ್ಟಾಧ್ಯಾಯಿ**, ಶರ್ವವರ್ಮನ **ಕಾತಂತ್ರ**, ಕೇಶಿರಾಜನ **ಶಬ್ಧಮಣಿ ದರ್ಪನ**, ನಿಜಗುಣ ಶಿವಯೋಗಿಗಳ **ಕೈವಲ್ಯ ಪದ್ಧತಿ** ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ಧಾನುಶಾಸ್ತ್ರ, ಛಂದಶಾಸ್ತ್ರ, ಕನ್ನಡ ವ್ಯಾಕರಣವನ್ನು ಶಾಸ್ತ್ರಬದ್ಧವಾಗಿ ಕಲಿತು ಅವುಗಳಲ್ಲಿ ನಿಷ್ಣಾತರಾದರು. ಬ್ರೈಲ್ ಲಿಪಿಯನ್ನು ಕಲಿತು 75ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರು ಸಂಗೀತಗಾರರಾಗಿ, ಹಾಡುಗಾರರಾಗಿ, ವಾಗ್ಗೇಯಕಾರರಾಗಿ, ಕವಿಯಾಗಿ ಸಾಹಿತಿಯಾಗಿ, ಸಮಾಜಸುಧಾರಕರಾಗಿ, ದಾರ್ಶನಿಕ ಪತ್ರಿಕೆಯ ಮಾರ್ಗದರ್ಶಕರಾಗಿ ಅಪೂರ್ವ ಸಾಧನೆ ಮಾಡುವಲ್ಲಿ ಅಂಗಹೀನತೆ ಅವರಿಗೆ ಅಡ್ಡಿಯಾಗಲಿಲ್ಲ.

**ಅಥವಾ**

* ವಿಶೇಷ ಚೇತನರ ವಿಷಯದಲ್ಲಿ ನಮ್ಮ ಹೊಣೆಗಾರಿಕೆ ಏನು ? ವಿವರಿಸಿ.

ಉತ್ತರ: ಉನ್ನತವಾದ ಗುರಿಯನ್ನು ಬೆಂಬತ್ತಲು ಯಾವುದೆ ರೀತಿಯ ದೈಹಿಕ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು. ಅದರೊಂದಿಗೆ ಅಸಾಧ್ಯವಾದುದನ್ನು ಸಾಧಿಸುವ ಛಲ ಸೇರಿಕೊಂಡರೆ ಗುರಿಯೂ ಇನ್ನೂ ಹತ್ತಿರವಾಗುತ್ತದೆ. ಆದ್ದರಿಂದ ಯಾವುದೇ ಅಂಗವೈಕಲ್ಯವಿದ್ದರೂ ಸಕಾರಾತ್ಮಕ ಚಿಂತನೆ ಮಾಡುವುದರ ಮೂಲಕ ಗುರಿಯನ್ನು ಸಾಧಿಸಬೇಕು. ವಿಕಲಾಂಗರ ವಿಷಯದಲ್ಲಿ ಸಾಮಾನ್ಯ ಜನರ ಹೊಣೆಗಾರಿಕೆ ಎಂದರೆ – ಅವರಲ್ಲಿ ಆತ್ಮಾಭಿಮಾನವನ್ನು ತುಂಬಬೇಕು. ಯಾವುದೆ ಕಾರಣಕ್ಕೂ ಅವರನ್ನು ಬೇರೆ ದೃಷ್ಟಿಯಿಂದ ಕಾಣಬಾರದು. ಸಕಾರಾತ್ಮಕ ಚಿಂತನೆಗೆ ಅವಕಾಶ ಮಾಡಿಕೊಡಬೇಕು. ಅವರಲ್ಲಿ ಕೀಳರಿಮೆ ಬೆಳೆಯದಂತೆ ನೋಡಿಕೊಳ್ಳಬೇಕು. ಪೂರ್ಣಾಂಗರಂತೆ ಬೆಳೆಯಲು ಪ್ರೇರಣೆ ನೀಡಬೇಕು.

26. ಅರ್ಜುನ ಮತ್ತು ಉತ್ತರನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

ಉತ್ತರ: ಕೌರವನ ಸೈನ್ಯವನ್ನು ನೋಡಿ ಅವರೆಡೆಗೆ ವೇಗವಾಗಿ ರಥವನ್ನು ಓಡಿಸುತಿದ್ದ ಅರ್ಜುನನಿಗೆ ಉತ್ತರನು ಈರೀತಿಯಾಗಿ ಹೇಳುತ್ತಾನೆ. ಕಣ್ಣುಗಳು ಈ ಸಮುದ್ರದಂತಿರುವ ಸೈನ್ಯವನ್ನು ಹಾಯಲಾರವು. ಮನಸ್ಸು ಇದನ್ನು ಹೊಕ್ಕು ಈಜಾಡಲಾರದು. ಇಂಥ ಸೈನ್ಯವನ್ನು ಎದುರಿಸಿ ಬದುಕುವುದುಂಟೆ? ಒಡಲು ಹಿಡಿದು ಇದ್ದರೆ ಯಾವ ಅದ್ಭುತವನ್ನು ಕಾಣಲಾಗದಿದ್ದೀತು? ಈ ನೆಲವೇ ಈ ಸೈನ್ಯವನ್ನು ಹಡೆದಿರುವಳೋ ಎಂಬಂತೆ ಹರಡಿದೆ. ಈ ಸೈನ್ಯದೊಡನೆ ಯುದ್ದ ಮಾಡಲು ಶಿವನೇ ಬರಬೇಕು. ಶಿವ ಶಿವಾ ನಾವು ಕಾದು ಗೆದ್ದದಾಯಿತು. ಇಗೋ ಈ ಬಲಕ್ಕೆ ನಮಸ್ಕಾರ ಮಾಡುತ್ತೇನೆ ಎಂದನು. ಇವನ ಮಾತುಗಳನ್ನು ಕೇಳಿಯೂ ಕೇಳಿಸದಂತೆ ಅರ್ಜುನ ರಥವನ್ನು ಓಡಿಸುತ್ತಿದ್ದನು. ಆಗ ಉತ್ತರನು ರಥದಿಂದ ಹಾರಿ ಬಿಟ್ಟಮಂಡೆಯಲಿ ಓಡಲಾರಂಭಿಸಿದನು. ಅರ್ಜುನನು ಉತ್ತರನನ್ನು ಹಿಡಿದು ನಿಲ್ಲಿಸಿ,

ನೀನು ಸಭೆಯಲ್ಲಿ ಹೆಂಗಳೆಯರ ಮುಂದೆ ಏನೆಲ್ಲ ಜಂಭಕೊಚ್ಚಿಕೊಂಡೆ ಯುದ್ಧ ಒದಗಿ ಬಂದಾಗ ಅದೇನಾಯಿತು? ನಾಡ ನರಿಯ ಹಾಗೆ ನನ್ನ ಮುಂದೆ ಹಲ್ಲು ಕಿರಿದರೆ ನಾನು ಬಿಡುತ್ತೇನೆಯೇ? ನಡೆ ಯುದ್ಧ ಮಾಡು ನಡೆ, ಎಂದಾಗ ಉತ್ತರನು ಒಪ್ಪಲಿಲ್ಲ. ಅರ್ಜುನನು ಉತ್ತರನಿಗೆ ಹಲವಾರು ಆಮಿಶಗಳನ್ನು ತೋರಿಸಿದಾಗ ಉತ್ತರನು, ಯುದ್ಧ ಭೂಮಿಯಲ್ಲಿ ಯುದ್ಧ ಮಾಡುವುದರಿಂದ ದೊರೆಯುವ ಪುಣ್ಯವಾಗಲಿ, ಪದವಿಯಾಗಲಿ ನನಗೆ ಬೇಡ. ನಮ್ಮ ದೊರೆತನವೇ ನನಗೆ ಇಂದ್ರ ಪದವಿ, ಸುರರ ಸತಿಯರ ಸ್ಥಾನವನ್ನು ಎಮ್ಮರಮನೆಯ ನಾರಿಯರು ತುಂಬುತ್ತಾರೆ. ನನ್ನನ್ನು ಬಿಟ್ಟು ಕಳುಹಿಸು ಎಂದನು.

**ಅಥವಾ**

* ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಯಾವ ವ್ಯತ್ಯಾಸಗಳು ಕಂಡು ಬರುತ್ತವೆ ?

ಉತ್ತರ: ಅರ್ಜುನ ಪಾಂಡವರಲ್ಲಿ ಅಪ್ರತೀಮ ವೀರ, ಆತ ಬ್ರಹನ್ನಳೆಯ ವೇಷದಲ್ಲಿದ್ದರೂ ಆತನ ಪೌರುಷ, ಸಾಹಸ, ಕರ್ತವ್ಯ ಪ್ರಜ್ಞೆ ಯಾವುದೂ ಕಡಿಮೆಯಾಗಿಲ್ಲ. ಉತ್ತರನು ಕೋಡ ಕ್ಷತ್ರಿಯನೆ ಆದರೆ ಅಂಜುಬುರುಕ ತನ್ನ ಪೌರುಷದ ಬಡಾಯಿಯನ್ನು ಹೆಂಗಳೆಯರ ಮುಂದೆ ಹೇಳಿಕೊಳ್ಳುತಿದ್ದ. ಉತ್ತರನು ಸೈನ್ಯವನ್ನು ನೋಡಿಯೇ ನಡುಗುತ್ತಿದ್ದನು. ಅರ್ಜುನ ರಥವನ್ನು ಓಡಿಸುವ ರೀತಿಯನ್ನು ಕಂಡು ಭಯ ಭೀತನಾಗಿದ್ದನು. ಹೀಗೆ ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ.

**ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

ಒಂದು ಊರಿನಲ್ಲಿ ಪಾರಿವಾಳ ಹಾಗೂ ಇರುವೆಗಳ ಸಂಸಾರ ವಾಸವಾಗಿತ್ತು. ಅವು ಒಂದನ್ನೊಂದು ಬಿಟ್ಟಿರಲಾರದೆ ಅನೋನ್ಯವಾಗಿ ಬಾಳುತ್ತಿದ್ದವು. ಒಂದು ದಿನ ಬೇಟೆಗಾರನೊಬ್ಬನು ಬೇಟೆಯಾಡಲು ಬರುತ್ತಾನೆ. ಪಾರಿವಾಳಗಳು ಮರದ ಮೇಲೆ ಕುಳಿತಿರುತ್ತವೆ. ಅವುಗಳಿಗೆ ಬೇಟೆಗಾರನು ಬಂದದ್ದು ತಿಳಿಯುವುದೆ ಇಲ್ಲ. ಬೇಟೆಗಾರನು ಪಾರಿವಾಳಗಳನ್ನು ಬೇಟೆಯಾಡಲು ಬಾಣವನ್ನು ಬಿಡಲು ಸಿದ್ಧನಾಗುತ್ತಾನೆ. ಇದನ್ನು ದೂರದಿಂದ ಗಮನಿಸಿದ ಇರುವೆಯು ತಮ್ಮ ಗೆಳೆಯರ ಪ್ರಾಣ ಕಾಪಾಡಬೇಕೆಂದು ಬೇಡನ ಕಾಲನ್ನು ಕಚ್ಚಿ ಅವನ ಬಾಣದ ಗುರಿಯನ್ನು ತಪ್ಪಿಸುತ್ತದೆ. ಕೆಲ ದಿನಗಳ ನಂತರ ಜೋರಾಗಿ ಬಿರುಗಾಳಿ ಬೀಸಿದಾಗ ಇರುವೆಯೊಂದು ನದಿಯ ನೀರಿನಲ್ಲಿ ಬಿದ್ದು ತೇಲಿಕೊಂಡು ಹೋಗುತಿತ್ತು. ಇದನ್ನು ಕಂಡ ಪಾರಿವಾಳ ತನ್ನ ಗೆಳೆಯ ಕಷ್ಟದಲ್ಲಿದ್ದಾನೆಂದು ತಿಳಿದು ಎಲೆಯನ್ನು ಕೊಕ್ಕಿನಲ್ಲಿ ಸಿಕ್ಕಿಸಿಕೊಂಡು ಇರುವೆಯನ್ನು ಹರಿಯುವ ನೀರಿನಿಂದ ಪಾರು ಮಾಡಿತು.

**ಪ್ರಶ್ನೆಗಳು :**

27. ಇರುವೆ ಮತ್ತು ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?
ಉತ್ತರ: ಇರುವೆ ಮತ್ತು ಪಾರಿವಾಳಗಳು ಒಂದನ್ನೊಂದು ಬಿಟ್ಟಿರಲಾರದೆ ಅನೋನ್ಯವಾಗಿ ಬಾಳುತ್ತಿದ್ದವು.

28. ಬೇಡನು ಯಾವುದಕ್ಕೆ ಗುರಿ ಇಟ್ಟನು ?
ಉತ್ತರ: ಬೇಡನು ಪಾರಿವಾಳಕ್ಕೆ ಗುರಿ ಇಟ್ಟನು.

29. ಇರುವೆ ತನ್ನ ಗೆಳೆಯನಿಗೆ ಹೇಗೆ ಸಹಾಯ ಮಾಡಿತು ?
ಉತ್ತರ: ಇರುವೆ ಬೇಡನ ಕಾಲನ್ನು ಕಚ್ಚಿ ಅವನ ಬಾಣದ ಗುರಿಯನ್ನು ತಪ್ಪಿಸಿ ಪಾರಿವಾಳದ ಪ್ರಾಣವನ್ನು ಕಾಪಾಡಿತು.

30. ಪಾರಿವಾಳ ನೀರಿನಲ್ಲಿ ಬಿದ್ದ ಇರುವೆಯನ್ನು ಹೇಗೆ ಕಾಪಾಡಿತು ?
ಉತ್ತರ: ಪಾರಿವಾಳ ಎಲೆಯನ್ನು ಕೊಕ್ಕಿನಲ್ಲಿ ಸಿಕ್ಕಿಸಿಕೊಂಡು ಇರುವೆಯನ್ನು ಹರಿಯುವ ನೀರಿನಿಂದ ಪಾರು ಮಾಡಿತು.

## ಭಾಗ –" ಬಿ"

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಪರ್ಯಾಯ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ, ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

31. 'ಭಾರತವು' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ :

ಎ) ಉ ಬಿ) ಅನ್ನು ಸಿ) ಅಲ್ಲಿ ಡಿ) ಅ

ಉತ್ತರ: ಎ) ಉ

32. 'ಕೃತಜ್ಞ' ಪದದ ವಿರುದ್ಧಾರ್ಥಕ ಪದ ಇದಾಗಿದೆ:

ಎ) ಅಕೃತಜ್ಞ ಬಿ) ಕೃತಘ್ನ ಸಿ) ಉಪಕಾರ ಡಿ) ಅಪಕಾರ

ಉತ್ತರ: ಬಿ) ಕೃತಘ್ನ

33. 'ಯೋಗಿ' ಪದದ ತದ್ಭವ ರೂಪವಿದು :

ಎ) ಭೋಗಿ ಬಿ) ಜೋಗಿ ಸಿ) ತ್ಯಾಗಿ ಡಿ) ಸಾದು

ಉತ್ತರ: ಬಿ) ಜೋಗಿ

34. 'ಬರ್ತಾನೆ' ಪದದ ಗ್ರಾಂಥಿಕ ರೂಪ :

ಎ) ಬರುತ್ತಾರೆ ಬಿ) ಬರುತ್ತಾಳೆ ಸಿ) ಬರ್ತಾನೆ ಡಿ) ಬರುತ್ತಾನೆ

ಉತ್ತರ: ಡಿ) ಬರುತ್ತಾನೆ

35. ಹೃಸ್ವಸ್ವರ ಹಾಗೂ ಹೃಸ್ವಸ್ವರಗಳಿಂದ ಕೂಡಿದ ಗುಣಿತಾಕ್ಷರಗಳನ್ನು ಗುರುತಿಸುವ ಮಾತ್ರಾ ಹೆಸರು :

ಎ) ಗುರು ಬಿ) ಯತಿ ಸಿ) ಲಘು ಡಿ) ಪ್ಲುತ

ಉತ್ತರ: ಸಿ) ಲಘು

36. 'ನಾಡನರಿ' ಇಲ್ಲಿರುವ ಅಲಂಕಾರ :

ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷೆ ಡಿ) ಅರ್ಥಾಂತರನ್ಯಾಸ

ಉತ್ತರ: ಬಿ) ರೂಪಕ

37. ಉತ್ತಮ ಪುರುಷ ಸರ್ವನಾಮಕ್ಕೆ ಉದಾಹರಣೆಯಾದ ಪದ :

ಎ) ನಾನು–ನಾವು ಬಿ) ನೀನು–ನೀವು ಸಿ) ಅವನು–ಅವರು ಡಿ) ಅದು–ಅವು

ಉತ್ತರ: ಎ) ನಾನು–ನಾವು

38. 'ಬಲಗಡಲು' – ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ತತ್ಪುರುಷ ಬಿ) ದ್ವಿಗು ಸಿ) ಕರ್ಮಧಾರೆಯ ಡಿ) ಗಮಕ

ಉತ್ತರ: ಸಿ) ಕರ್ಮಧಾರೆಯ

39. ಅಕ್ಕತಂಗಿಯರು ಕೂಡಿ ಬೇಗಬೇಗ ಶಾಲೆಗೆ ಹೋದರು. – ಇಲ್ಲಿರುವ ಜೋಡಿಪದ :

ಎ) ಬೇಗಬೇಗ ಬಿ) ಶಾಲೆಗೆ ಹೋದರು ಸಿ) ಅಕ್ಕತಂಗಿಯರು ಡಿ) ಯಾವುದು ಇಲ್ಲ

ಉತ್ತರ: ಸಿ) ಅಕ್ಕತಂಗಿಯರು

40. 'ಗೂಡಾರ್ಥ' ಪದದ ಅರ್ಥ :
ಎ) ಸಾಮಾನ್ಯಾರ್ಥ ಬಿ) ವಿಶೇಷಾರ್ಥ ಸಿ) ಒಳಾರ್ಥ ಡಿ) ಸಂಭವನಾರ್ಥ
ಉತ್ತರ: ಸಿ) ಒಳಾರ್ಥ

41. 'ದೇಹದೊಳಾತ್ಮ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :
ಎ) ಲೋಪಸಂಧಿ ಬಿ) ಸವರ್ಣದೀರ್ಘ ಸಿ) ಆಗಮಸಂಧಿ ಡಿ) ಆದೇಶಸಂಧಿ
ಉತ್ತರ: ಬಿ) ಸವರ್ಣದೀರ್ಘ

42. 'ಹೊಂಚುಹಾಕು' ನುಡಿಗಟ್ಟಿನ ಅರ್ಥ :
ಎ) ದ್ವೇಷಸಾಧಿಸು ಬಿ) ಸಮಯಸಾಧಿಸು ಸಿ) ಪ್ರೋತ್ಸಾಹಿಸು ಡಿ) ಮೋಸಮಾಡು
ಉತ್ತರ: ಬಿ) ಸಮಯಸಾಧಿಸು

## ಭಾಗ – ಸಿ

**ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.**

43. * ತಾ ಕಳ್ಳ ಪರರ ನಂಬ
* ಬೆಳ್ಳಗಿರುವುದೆಲ್ಲ ಹಾಲಲ್ಲ
* ಬೆಳೆಯುವ ಸಿರಿ ಮೊಳಕೆಯಲ್ಲಿ

### * ತಾ ಕಳ್ಳ ಪರರ ನಂಬ.

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ – ತನ್ನಂತೆ ಇತರರನ್ನು ಕಾಣುವುದು ಮಾನವನ ಸಹಜ ಗುಣವಾಗಿದೆ. ಅದು ಸರ್ವಜ್ಞ ಕವಿ ಹೇಳಿದಂತೆ 'ತನ್ನಂತೆ ಪರರ ಬಗೆದೊಡೆ ಕೈಲಾಸ ಭಿನ್ನಾಣವಕ್ಕು ಸರ್ವಜ್ಞ' ಎಂದಾದರೆ ಒಳ್ಳೆಯದು. ಆದರೆ ಕಳ್ಳರು ತಮ್ಮ ದೋಷ ಗುಣವನ್ನು ಇತರರಲ್ಲಿ ಕಂಡು ಇವರೂ ಕಳ್ಳರು ಎಂಬ ಅನುಮಾನವನ್ನು ಹೊಂದುತ್ತಾರೆ. 'ಕಾಮಾಲೆ ಕಣ್ಣಿನವರಿಗೆ ಜಗತ್ತೆಲ್ಲ ಹಳದಿ ಕಾಣುತ್ತದೆ.' ಎನ್ನುವ ಹಾಗೆ ಇವರು ಯಾರೊಂದಿಗೂ ವಿಶ್ವಾಸದಿಂದ ಇರುವುದಿಲ್ಲ. ನಾವು ಇತರರ ಬಗ್ಗೆ ಸಕಾರಾತ್ಮಕ ಮನೋಭಾವನೆಯನ್ನು ಹೊಂದಬೇಕು ಎನ್ನುವುದು ಈ ಗಾದೆ ಮಾತಿನ ಆಶಯವಾಗಿದೆ.

**ಅಥವಾ**

### * ಬೆಳ್ಳಗಿರುವುದೆಲ್ಲ ಹಾಲಲ್ಲ.

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

ವಿವರಣೆ– ಸಮಾಜದಲ್ಲಿ ಕೆಲವು ಜನರು ನೋಡಲು ಸಜ್ಜನರಂತೆ ಕಾಣುತ್ತಾರೆ. ಆದರೆ ಅವರ ಮನಸ್ಸು ಗೋಮುಖ ವ್ಯಾಘ್ರನಂತೆ ಇರುತ್ತದೆ. ನಾವು ಯಾರನ್ನಾದರು ನಂಬ ಬೇಕಾದರೆ ಅವರನ್ನು ಪೂರ್ಣವಾಗಿ ತಿಳಿದಿರಬೇಕು. ಇಲ್ಲದಿದ್ದರೆ ಮೋಸಹೋಗ ಬೇಕಾಗುತ್ತದೆ. ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**ಅಥವಾ**

* **ಬೆಳೆಯುವ ಸಿರಿ ಮೊಳಕೆಯಲ್ಲಿ.**

ಪೀಠಿಕೆ – ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.
ವಿವರಣೆ– ಮುಂದೆ ಬೆಳೆಯಬಹುದಾದ ಪೈರಿನ ಗುಣವನ್ನು ಅದು ಮೊಳಕೆಯಲ್ಲಿ ಇದ್ದಾಗಲೇ ಕಂಡುಬರುತ್ತದೆ. ಒಬ್ಬ ಸಾಧಕನ ಸಾಧನೆಯ ಗುಣ ಆತನ ಬಾಲ್ಯದಲ್ಲಿಯೇ ಕಂಡು ಬರುತ್ತದೆ. ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ. ಪಂಡಿತ ಪುಟ್ಟರಾಜ ಗವಾಯಿಗಳ ಸಾಧನೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. 'ಮೂರು ವರ್ಷದ ಬುದ್ದಿ ನೂರು ವರ್ಷದವರೆಗೆ' ಈ ಗಾದೆ ಪರ್ಯಾಯ ಗಾದೆಯಾಗಿದೆ.

44. ನೀವು ತುಮಕೂರು ಸರಕಾರಿ ಪ್ರೌಢ ಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿ ಅರುಣ ಎಂದು ತಿಳಿದು ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವ ಕುರಿತು ಸರಕಾರಿ ಪ್ರೌಢ ಶಾಲೆ ಬಳ್ಳಾರಿಯಲ್ಲಿ 10ನೇ ತರಗತಿಯಲ್ಲಿ ಓದುತ್ತಿರುವ ನಿಮ್ಮ ಗೆಳೆಯ ಪ್ರದೀಪನಿಗೆ ಪತ್ರ ಬರೆಯಿರಿ.

ಇವರಿಂದ
ಅರುಣ, 10ನೇ ತರಗತಿ
ಸ. ಪ್ರೌ. ಶಾಲೆ ತುಮಕೂರ
ದಿನಾಂಕ 27.01.2018

ಆತ್ಮೀಯ ಗೆಳಯ ಪ್ರದೀಪನಿಗೆ, ಅರುಣ ತಿಳಿಸುವ ವಂದನೆಗಳು.

ಈಗ ಪತ್ರ ಬರೆಯಲು ಕಾರಣವೆಂದರೆ ನಾನೂ ನನ್ನ ಅಭ್ಯಾಸದೊಂದಿಗೆ ಆರೋಗ್ಯವಾಗಿದ್ದೇನೆ. ನಮ್ಮ ಶಾಲೆಯಲ್ಲಿ ದಿನಾಂಕ 26.01.2018ರಂದು ಶಾಲೆಯಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮ ಜರುಗಿತು. ಮುಖ್ಯಗುರುಗಳು ದ್ವಜಾರೋಹಣ ಮಾಡಿ 'ಗಣರಾಜ್ಯೋತ್ಸವ ನಡೆದು ಬಂದ ದಾರಿ' ವಿಷಯ ಕುರಿತು ಮಾತನಾಡಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸಿದ್ದೆ. ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿ ಜರುಗಿತು. ಮನೆಯಲ್ಲಿ ತಾಯಿ, ಅಕ್ಕ, ಅಣ್ಣ ಇವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸು.

ವಂದನೆಗಳು

ನಿನ್ನ ಆತ್ಮೀಯ ಗೆಳತಿ
ಅರುಣ

ವಿಳಾಸ
ಪ್ರದೀಪ, ಹತ್ತನೇ ತರಗತಿ.
ಸರ್ಕಾರಿ ಪ್ರೌಢ ಶಾಲೆ
ಬಳ್ಳಾರಿ

**ಅಥವಾ**

ನಿಮ್ಮನ್ನು ಬೆಂಗಳೂರಿನ ಅಶ್ವತ್ಥ ನಗರದ ಅರ್ಚನಾ ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯ ಬೀದಿ ದೀಪವನ್ನು ಸರಿಪಡಿಸುವಂತೆ ಬೆಸ್ಕಾಂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.

ದಿನಾಂಕ 15.03.2018

**ಇವರಿಂದ**
ಅರ್ಚನಾ
ಅಶ್ವತ್ಥನಗರ
ಬೆಂಗಳೂರು

**ಇವರಿಗೆ,**
ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಬೆಸ್ಕಾಂ, ಬೆಂಗಳೂರು

ವಿಷಯ : ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ಮನವಿ ಪತ್ರ.

ಮಾನ್ಯರೇ,

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಅರ್ಚನಾ ಅಶ್ವತ್ಥನಗರ ನಿವಾಸಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ನಮ್ಮ ನಗರದ ಮುಖ್ಯ ಬೀದಿಯಲ್ಲಿರುವ ಬೀದಿ ದೀಪಗಳು ಕೆಟ್ಟು ಹೋಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ಕಳ್ಳಕಾಕರ ಹಾವಳಿ ಹೆಚ್ಚಾಗುತ್ತಿದೆ. ಮುದುಕರು, ಮಕ್ಕಳು ರಾತ್ರಿ ವೇಳೆಯಲ್ಲಿ ಸಂಚರಿಸಲು ತುಂಬಾ ತೊಂದರೆಯಾಗುತ್ತಿದೆ. ಕಾರಣ ದಯಾಳುಗಳಾದ ತಾವು ಆದಷ್ಟು ಬೇಗನೆ ಬೀದಿ ದೀಪಗಳನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿ

ವಂದನೆಗಳು

ಸ್ಥಳ – ಅಶ್ವತ್ಥನಗರ
ಬೆಂಗಳೂರು

ತಮ್ಮ ವಿಶ್ವಾಸಿಕರು
ಅರ್ಚನಾ

**ಕೆಳಗಿನ ಯಾವುದಾದರೊಂದು ವಿಷಯ ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

45. * **ಭ್ರಷ್ಟಾಚಾರ**

ಪೀಠಿಕೆ – ಭ್ರಷ್ಟಾಚಾರವು ದೇಶಕ್ಕೆ ಅಂಟಿದ ಶಾಪವಾಗಿದೆ. ಇದರಿಂದ ದೇಶದಲ್ಲಿ ಭದ್ರತೆ, ಸುಸ್ಥಿರತೆ ಇಲ್ಲದಾಗುತ್ತದೆ. ಆರ್ಥಿಕ ಕುಸಿತದಿಂದ ಅರಾಜಕತೆ ಉಂಟಾಗುತ್ತದೆ. ಆದ್ದರಿಂದ ಪ್ರಜ್ಞಾವಂತ ನಾಗರಿಕ ಸಮಾಜ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕಿದೆ.

ವಿವರಣೆ – 'ಲಾಭಕೋರತನಕ್ಕಾಗಿ ಮಾಡುವ ಕಳ್ಳ ವ್ಯಾಪಾರವೇ ಭ್ರಷ್ಟಾಚಾರ' ದೇಶದ ಪ್ರತಿಭಾವಂತ ಜನರಲ್ಲಿ ಅನ್ಯಾಯವನ್ನು ಖಂಡಿಸುವ ಹಾಗೂ ಅದರ ವಿರುದ್ಧ ಹೋರಾಡುವ ಮನೋಭಾವ ಬೆಳೆಯ ಬೇಕಾಗಿದೆ. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಪ್ರಾಮಾಣಿಕತೆಯನ್ನು ತರುವ ಪ್ರಯತ್ನ ನಡೆಯಬೇಕಿದೆ. ಭ್ರಷ್ಟಾಚಾರದ ಹೆಚ್ಚಳದಿಂದ ದೇಶದಲ್ಲಿ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ, ಬಡವರು ಬಡವರಾಗಿಯೇ ಉಳಿದಿದ್ದಾರೆ. ಈ ಅಸಮತೋಲನವನ್ನು ಹೋಗಲಾಡಿಸುವುದಕ್ಕಾಗಿ ಭ್ರಷ್ಟಾಚಾರವೆಂಬ ಪೆಡಂಭೂತ ದೇಶ ಬಿಟ್ಟು ತೊಲಗಬೇಕಿದೆ.

ಉಪಸಂಹಾರ – ಭ್ರಷ್ಟಾಚಾರ ಹೋಗಲಾಡಿಸಲು ಕೆಲವೆ ಕೆಲವು ಜನರು ಹೋರಾಡಿದರೆ ಸಾಲದು. ದೇಶದ ಸಮಸ್ತ ಜನರು ಅದರ ವಿರುದ್ಧ ಹೋರಾಡಬೇಕಿದೆ.

**ಅಥವಾ**

*** ಪರಿಸರ ಸಂರಕ್ಷಣೆ**

ಪೀಠಿಕೆ – ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ.
ವಿವರಣೆ – ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳುಮಾಡುತ್ತಿದ್ದಾನೆ. ಇದಕ್ಕೆ ಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕ ರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.
ಉಪಸಂಹಾರ – ಪರಿಸರ ದಿನದಿಂದ ದಿನಕ್ಕೆ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು, ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆಯ ಇಂದಿನ ಅಗತ್ಯವಾಗಿದೆ.

**ಅಥವಾ**

*** ರಾಷ್ಟ್ರೀಯ ಹಬ್ಬಗಳು**

ಪೀಠಿಕೆ – ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ವಿವರಣೆ – ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು ನಾವೂ ಭಾರತೀಯರು ಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು ಅಗಸ್ಟ 15 ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದು ಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ ಗಣರಾಜ್ಯೋತ್ಸವ ದೇಶ ಏಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

ಉಪಸಂಹಾರ – ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡಿ ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಪ್ರಮುಖ ಪಾತ್ರವಹಿಸುತ್ತವೆ.

# % ಗುರಿ %

- ವಿದ್ಯೆಯೇ ಅಮೃತ
- ಸತತ ಪ್ರಯತ್ನವಿದ್ದಲ್ಲಿ ಆತ್ಮ ವಿಶ್ವಾಸ ಗಟ್ಟಿಗೊಳ್ಳುತ್ತದೆ
- ಪುಸ್ತಕಗಳು ಜ್ಞಾನ ಭಂಡಾರದ ಕೀಲಿ ಕೈ
- ಶೃದ್ಧೆ, ನಿಷ್ಠೆ, ಆತ್ಮವಿಶ್ವಾಸವಿದ್ದಲ್ಲಿ ಯಶಸ್ಸು ನಿಶ್ಚಿತ
- ಬದುಕಿಗೊಂದು ಗುರಿಯಿರಲಿ, ಗುರಿ ಸಾಧನೆಗಾಗಿ ಛಲವಿರಲಿ

ಪುಸ್ತಕ ದೊರೆಯುವ ಸ್ಥಳ: ಕಲಬುರ್ಗಿ: ಸಪ್ನಾ ಬುಕ್ ಸ್ಟಾಲ್, ಬಿ.ಬಿ. ರಜಾ ಕಾಲೇಜ ಹತ್ತಿರ